ಡಾ. ಶಂ. ಬಾ. ಜೋಶಿ

ವ್ಯಕ್ತಿ ಪರಿಚಯ



ಕರ್ನಾಟಕ ಜಾನಪದ ಪರಿಷತ್ತು ಬೆಂಗಳೂರು

ಡಾ. ರಾಜಶೇಖರ ಇಚ್ಚಂಗಿ

ಜನಪ್ರಿಯ ಜಾನಪದ ಪುಸ್ತಕ ಮಾಲೆ-೩೧

ಡಾ. ಶಂ. ಬಾ. ಜೋಶಿ

ವ್ಯಕ್ತಿ ಪರಿಚಯ

ಡಾ॥ ರಾಜಶೇಖರ ಇಚ್ಚಂಗಿ
ಚೈತ್ರ, ವಿವೇಕಾನಂದನಗರ, ಹುಕ್ಕೇರಿ-೫೯೧ ೩೦೯
ಬೆಳಗಾವಿ ಜಿಲ್ಲೆ

ಕರ್ನಾಟಕ ಜಾನಪದ ಪರಿಷತ್ತು
ನಂ. ೧, ಜಲದರ್ಶಿನಿ ಬಡಾವಣೆ
ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,
ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು-೫೬೦ ೦೫೪

Dr. S. B. JOSHI- A Pen Portrait-By **Dr. Rajashekhara Ichchangi.** Pulished by **Karnataka Janapada Parishath,** No. 1, Jaladarshini Layout, Near M. S. Ramaiah Hospital Gate, New BEL Road, Bangalore-560 054,
Phone : 080-23605033. Janapada Loka : 7201143

ಪ್ರಥಮ ಮುದ್ರಣ : ೨೦೦೮ ಪುಟಗಳು : ೩೨

ಪ್ರತಿಗಳು : ೨೦೦೦

ಬೆಲೆ : **ರೂ. ೧೦** (ಹತ್ತು ರೂಪಾಯಿ)

ಗ್ರಂಥ ಪ್ರಕಟಣಾ ಸಲಹಾ ಸಮಿತಿ

ಮುದ್ರಕರು :

ಚಂದನ ಪ್ರಿಂಟರ್ಸ್
ನಂ. ೫೭, ವಿನಾಯಕ ಕಾಂಪ್ಲೆಕ್ಸ್
೮೦ ಅಡಿ ರಸ್ತೆ, ೯ನೇ ಮೇನ್, ಶ್ರೀನಿವಾಸನಗರ
ಬ್ಯಾಂಕ್ ಕಾಲೋನಿ, ಬೆಂಗಳೂರು–೫೬೦ ೦೫೦

ಅಧ್ಯಕ್ಷರ ಮಾತು

ಕರ್ನಾಟಕ ಜಾನಪದ ಪರಿಷತ್ತಿನ ಹಲವು ಯೋಜನೆಗಳಲ್ಲಿ ಜನಪದ ಪುಸ್ತಕ ಪ್ರಕಟಣೆ ಒಂದು. ಇದರಲ್ಲಿ ವಿದ್ವತ್ ಗ್ರಂಥಗಳ ಪ್ರಕಟಣೆಗಳೇ ಹೆಚ್ಚು. ಇವುಗಳ ಜೊತೆಗೆ 'ಜನಪ್ರಿಯ ಜಾನಪದ ಪುಸ್ತಕ ಮಾಲೆ'ಯನ್ನು ಪ್ರಾರಂಭಿಸಿದೆ. ಜಾನಪದವನ್ನು ಜನಸಾಮಾನ್ಯರಿಗೆ ತಲುಪಿಸುವುದು ಇದರ ಮುಖ್ಯ ಉದ್ದೇಶ. ಇದರಲ್ಲಿ ಜಾನಪದಕ್ಕೆ ದುಡಿದಿರುವ, ದುಡಿಯುತ್ತಿರುವ ಕಲಾವಿದರು, ಕಲೆಗಳು, ಸಂಗ್ರಾಹಕರು, ವಿದ್ವಾಂಸರು, ಸ್ವಾರಸ್ಯಕರವಾದ ಉಪಯುಕ್ತವಾದ ಜನಪದ ಗೀತ ಸಾಹಿತ್ಯದ ಸೋದಾಹರಣ ವ್ಯಾಖ್ಯಾನ– ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ, ನಾಡಿನ ಪ್ರಸಿದ್ಧ ಸಾಹಿತಿ ಸಂಶೋಧಕರಿಂದ ಕಿರುಗ್ರಂಥಗಳನ್ನು ಬರೆಯಿಸಿ, ಪ್ರಕಟಿಸಿ, ಕೇವಲ ಹತ್ತು ರೂಪಾಯಿ ಬೆಲೆಗೆ ಒದಗಿಸಲು ಯೋಜಿಸಿದೆ. ಕಡಿಮೆ ಅವಧಿಯಲ್ಲಿ ಓದಿಕೊಳ್ಳಬಹುದಾದ ಈ ಗ್ರಂಥಗಳು ಹಲವು ಮಾಹಿತಿಗಳನ್ನು ಸಂಕ್ಷಿಪ್ತವಾಗಿ ತಿಳಿಯಪಡಿಸುತ್ತವೆ.

ಈ ಜನಪ್ರಿಯ ಪುಸ್ತಕ ಮಾಲೆಗೆ ಖ್ಯಾತ ಲೇಖಕರಾದ ಡಾ. **ರಾಜಶೇಖರ ಇಚ್ಚಂಗಿ** ಅವರು **'ಡಾ. ಶಂ. ಬಾ. ಜೋಶಿ'** ಅವರನ್ನು ಕುರಿತು ಕಿರುಹೊತ್ತಿಗೆಯನ್ನು ಬರೆದುಕೊಟ್ಟಿದ್ದಾರೆ. ಲೇಖಕರಿಗೂ ಗ್ರಂಥ ಪ್ರಕಟನಾ ಸಮಿತಿಯ ಸದಸ್ಯರಿಗೂ ಕೃತಜ್ಞತೆಗಳನ್ನು ಅರ್ಪಿಸಿ, ಸಹೃದಯರು ಈ ಪುಸ್ತಕವನ್ನು ಸ್ವಾಗತಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಜಿ. ನಾರಾಯಣ
ಅಧ್ಯಕ್ಷರು
ಕರ್ನಾಟಕ ಜಾನಪದ ಪರಿಷತ್ತು

೦೪–೮–೨೦೦೮
ಬೆಂಗಳೂರು

ಡಾ. ಶಂ. ಬಾ. ಜೋಶಿ

ಈಗಿನ ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಗುರ್ಲ ಹೊಸೂರಿನಲ್ಲಿ ೧೮೯೬ ಜನವರಿ ೪ ರಂದು ಜನಿಸಿದರು. ತಂದೆಯ ಹೆಸರು ಬಾಳದೀಕ್ಷಿತ. ತಾಯಿಯ ಹೆಸರು ಉಮಾಬಾಯಿ. ಜೋಶಿ ಎಂಬುದು ಮನೆತನದ ಹೆಸರು. ಹುಟ್ಟಿನ ಹೆಸರು ಶಂಕರ. ಹೀಗಾಗಿ ಶಂಕರ ಬಾಳದೀಕ್ಷಿತ ಜೋಶಿ. ಅವರು 'ಶಂಬಾ' ಎಂದೇ ನಾಡಿಗೆ ಪ್ರಖ್ಯಾತಿ.

'ಶಂಬಾ' ಅವರದು ವೈದಿಕ ಮನೆತನ. ತಂದೆಯಿಂದ ವೇದಜ್ಞಾನ, ತಾಯಿಯಿಂದ ಸಾಹಿತ್ಯ ಸಂಗೀತ ಜ್ಞಾನ ಪಡೆದರು. ಪ್ರಾಥಮಿಕ ಶಿಕ್ಷಣವನ್ನು ಗುರ್ಲ ಹೊಸೂರಿನಲ್ಲಿಯೇ ಪಡೆದ 'ಶಂಬಾ' ಅವರು ಹುಟ್ಟಿನಿಂದಲೇ ಪ್ರತಿಭಾವಂತರು. ಆದರೆ ಬಡತನದ ಬವಣೆ ಅವರ ಶೈಕ್ಷಣಿಕ ಜೀವನಕ್ಕೆ ಉತ್ತೇಜನ ನೀಡಲಿಲ್ಲ. ಬಾಳಾಜಿ ಕೃಷ್ಣ ಹಳೇಪೇಟೆ ಎಂಬವರು ಶಂಬಾ ಅವರ ಬಾಲ್ಯದ ಗುರುಗಳು. ೧೯೧೪ ರಲ್ಲಿ ಮಲಪ್ರಭೆಗೆ ಮಹಾಪೂರ ಬಂದು ಗುರ್ಲ ಹೊಸೂರಿನ ಮನೆ ಜಲಮಯವಾಯಿತು. ಜೊತೆಗೆ ಚಿಕ್ಕಂದಿನಲ್ಲಿ ತಂದೆಯ ಸಾವು. ಆದ್ದರಿಂದ ಅಜ್ಜಿಯ ಮನೆಯಿದ್ದ ಪುಣೆಗೆ ಮನೆಯವರೆಲ್ಲ ಹೋದರು. ಅಲ್ಲಿ ಅಣ್ಣ ಬಾನುದೀಕ್ಷಿತ ಜೋಶಿ, ಪೌರೋಹಿತ್ಯ ಮಾಡಿಕೊಂಡು ಇರಲು ಹೇಳಿದರು. ಆದರೆ ಪೌರೋಹಿತ್ಯದ ಕಡೆಗೆ ಶಂ.ಬಾ. ಅವರ ಮನಸ್ಸು ಒಪ್ಪಲಿಲ್ಲ. ಅಲ್ಲಿ ಲೋಕಮಾನ್ಯ ತಿಲಕರ ಸಂಪರ್ಕ ಪಡೆದುಕೊಂಡರು. ಆದರ್ಶವಾದ ರಾಷ್ಟ್ರೀಯತೆಯ ಭಾವನೆ, ಹೃದಯದಲ್ಲಿ ಬೆಳೆಯಿತು. ಶಿಕ್ಷಕರಾಗಿ ಸ್ವತಂತ್ರ ಜೀವನ ನಡೆಸಲು

ನಿರ್ಧರಿಸಿದರು. ಅಲ್ಲಿಂದ ಧಾರವಾಡಕ್ಕೆ ಬಂದರು. ಸರಕಾರಿ ಟ್ರೈನಿಂಗ್ ಕಾಲೇಜು ಪ್ರವೇಶಿಸಿದರು. ಅಲ್ಲಿ ಎಲ್. ಸಿ. ರಾಮರಾವ್, ಮ. ಪ್ರ. ಪೂಜಾರ, ಮೂರ್ತಾಚಾರ್ಯ ಮೊದಲಾದ ಗುರುಗಳಿಂದ ತರಬೇತಿ ಪಡೆದರು. ಶಂಬಾ ಅವರ ಕನ್ನಡ-ಸಂಸ್ಕೃತಗಳ ಸಾಹಿತ್ಯ ಶಾಸ್ತ್ರಜ್ಞಾನ, ಜಿಜ್ಞಾಸೆಗಳು ಚಿಕ್ಕಂದಿನಲ್ಲಿಯೆ ಬೆಳೆದವು.

೧೯೧೯ ರಲ್ಲಿ ಧಾರವಾಡದ ಸರಕಾರಿ ಟ್ರೇನಿಂಗ್ ಕಾಲೇಜಿನಲ್ಲಿ ರ್‍ಯಾಂಕ್ ಪಡೆದರು. ೧೯೨೦ ರಲ್ಲಿ ಬೆಳಗಾವಿ ಜಿಲ್ಲೆ ಚಿಕ್ಕೋಡಿಯಲ್ಲಿ ಮೊದಲಬಾರಿಗೆ ಶಿಕ್ಷಕರಾದರು. ಆಗ ತಿಲಕರ ಮರಣವಾರ್ತೆ ಬಂದಿತು. ಇದರಿಂದ ಶಂ ಬಾ ಅವರಿಗೆ ತೀವ್ರ ಮಾನಸಿಕ ವೇದನೆ ಆಯಿತು. ಈ ನೋವು ಮಾಯವಾಗುವಂತೆ ಚಿಕ್ಕೋಡಿಗೆ ಗಾಂಧೀಜಿ ಅವರ ಆಗಮನವಾಯಿತು. ಸ್ವಯಂ ಸೇವಕರಾಗಿ ಅವರೊಡನೆ ದುಡಿದರು. ಗಾಂಧೀಜಿ ಬೆನ್ನುಹತ್ತಿ, ಬೆಳಗಾವ-ಧಾರವಾಡದತನಕ ಪ್ರಯಾಣಮಾಡಿದರು. ಸ್ವಾತಂತ್ರ್ಯ ಚಳಿವಳಿಯಲ್ಲಿ ಆಸಕ್ತಿತೋರುತ್ತಾರೆಂದು ತಿಳಿದು ಅವರನ್ನು ಚಿಕ್ಕೋಡಿಯಿಂದ ಉಗರಗೋಳಕ್ಕೆ ವರ್ಗಾವಣೆ ಮಾಡಲಾಯಿತು. ಅಲ್ಲಿ ಕನ್ನಡ ಕಾವ್ಯಗಳ ಅಧ್ಯಯನಕ್ಕೆ ತೊಡಗಿದರು. ಗೋವಿಂದ ಚುಳಕಿ ಅವರ ಸಹವಾಸ ಪ್ರೋತ್ಸಾಹ ದೊರೆಯಿತು. ಹೊಟ್ಟೆಪಾಡಿಗಾಗಿ ಬದುಕುವದಕ್ಕೆಂದು ಮನಸ್ಸು ಒಪ್ಪಲಿಲ್ಲ. ಹೀಗಾಗಿ ನೌಕರಿಗೆ ಶರಣು ಹೇಳಿ, ಧಾರವಾಡಕ್ಕೆ ಬಂದರು. ಜಮುಖಂಡಿಯ ಪಾರ್ವತಿದೇವಿಯೊಂದಿಗೆ ವಿವಾಹವಾಯಿತು. ಮುಂದೆ ಧಾರವಾಡದ ತಮ್ಮ ಅಕ್ಕನ ಮನೆಯಲ್ಲಿ ವಾಸಮಾಡತೊಡಗಿದರು. ಮುದವೀಡು ಅವರು ನಡೆಸುತ್ತಿದ್ದ 'ಕರ್ನಾಟಕ ವೃತ್ತ' ಮತ್ತು 'ಧನಂಜಯ' ಪತ್ರಿಕೆಗಳಲ್ಲಿ ಖಾದಿ, ಅಸ್ಪೃಶ್ಯೋದ್ಧಾರ ಕುರಿತು ರಾಷ್ಟ್ರೀಯ ಭಾವನೆ ಪ್ರೇರೇಪಿಸುವ

ಲೇಖನಗಳನ್ನು ಬರೆದು, ಜಾಗೃತಿಗೊಳಿಸಿದರು. 'ಕರ್ಮವೀರ' ಪತ್ರಿಕೆಯ ಹೊಣೆಹೊತ್ತಿದ್ದ ಆಲೂರ ವೆಂಕಟರಾಯರಿಗೆ ಶಂಬಾ ನೆರವು ನೀಡಿದರು.

ಕನ್ನಡ ಸಾಹಿತ್ಯದ ಆಧುನಿಕ ಚರಿತ್ರೆಯಲ್ಲಿ ಧಾರವಾಡದ ಗೆಳೆಯರ ಗುಂಪಿನ ಸಾಧನೆ ಗಮನಾರ್ಹವಾದುದು. ಶಂ ಬಾ, ಬೇಂದ್ರೆ, ಗೋಕಾಕ, ಮುಗಳಿ, ಆನಂದಕಂದ, ಜಿ. ಬಿ. ಜೋಶಿ ಹೀಗೆ ಹಲವಾರು ಸಾಹಿತಿಗಳು ಕನ್ನಡ ಸಾಹಿತ್ಯ ಸಂಸ್ಕೃತಿಯ ಬೆಳವಣಿಗೆಗೆ ಶ್ರಮಿಸಲು ನಿರ್ಧರಿಸಿದ್ದರು. ಆಲೂರ ವೆಂಕಟರಾಯರ 'ಜಯಕರ್ನಾಟಕ' ಗೆಳೆಯರ ಗುಂಪಿನ ಚಟುವಟಿಕೆಗಳಿಗೆ ಅಭಿವ್ಯಕ್ತಿ ಮಾಧ್ಯಮವಾಯಿತು. ಶಂ ಬಾ ಜೋಶಿಯವರು ಗೆಳೆಯರ ಗುಂಪಿನಲ್ಲಿ ಕ್ರಿಯಾಶೀಲರಾಗಿದ್ದರು. ಮನೋಹರ ಗ್ರಂಥಮಾಲೆಯ ಸ್ಥಾಪಕರಲ್ಲಿ ಒಬ್ಬರಾಗಿದ್ದರು. ೧೯೨೪ ರಲ್ಲಿ ಬೆಳಗಾವಿಯಲ್ಲಿ ನಡೆದ ಪ್ರಥಮ ಕರ್ನಾಟಕ ಏಕೀಕರಣ ಸಮ್ಮೇಳನದಲ್ಲಿ 'ಶಂ ಬಾ', ಮಂಗಳವೇಡೆ ಶ್ರೀನಿವಾಸರಾಯರು ಕಾರ್ಯದರ್ಶಿಯಾಗಿದ್ದರು.

ಶಂ ಬಾ ಜೋಶಿ ಅವರು ಆದರ್ಶದ ಬೆನ್ನುಹತ್ತಿ ದೇಶಸೇವೆ ಮಾಡಲು ಮುಂದಾದರೂ ಮನೆ ನಡೆಸಲು ಯಾವುದಾದರೂ ಉದ್ಯೋಗ ಮಾಡಲೇಬೇಕಾಗತ್ತು. ಹೀಗಾಗಿ ಅವರು ಶಿಕ್ಷಕರಾಗಿ ದುಡಿಯಲು ನಿರ್ಧರಿಸಿದರು. ಧಾರವಾಡದ ಕರ್ನಾಟಕ ಹೈಸ್ಕೂಲಿನಲ್ಲಿ ಒಂದು ವರ್ಷ (೧೯೨೬–೨೭) ಕೆಲಸ ಮಾಡಿದರು. ಮುಂದೆ ೧೯೨೮ ರಿಂದ ೧೯೪೬ ರವರೆಗೆ ಧಾರವಾಡದ ವಿಕ್ಟೋರಿಯಾ ಹೈಸ್ಕೂಲಿನಲ್ಲಿ (ಈಗಿನ ವಿದ್ಯಾರಣ್ಯ ಹೈಸ್ಕೂಲು) ನಿವೃತ್ತಿಯಾಗುವವರೆಗೆ ಶಿಕ್ಷಕರಾಗಿ ಸೇವೆಸಲ್ಲಿಸಿದರು. ಶೈಕ್ಷಣಿಕ ಸೇವೆಮಾಡುತ್ತಲೇ ಕನ್ನಡ ಸಂಶೋಧನೆಯ ಮಾರ್ಗದಲ್ಲಿ ಮುಂದುವರಿದರು. ನೂರಾರು ಜನ ತರುಣರು 'ಶಂ ಬಾ ಅವರ ಮಾರ್ಗದರ್ಶನದಲ್ಲಿ ತಯಾರಾದರು. ಗೋವಿಂದ ಪೈ, ಬೆಟಗೇರಿ ಕೃಷ್ಣಶರ್ಮ, ಶಿವರಾಮ ಕಾರಂತ, ವಿ. ಸೀ. ದೇವುಡು,

ಕ. ವೆಂ. ರಾಘವಾಚಾರ್ಯ, ಆರ್. ವಿ. ಜಾಗೀರದಾರ್, ಇರಾವತಿ ಕರ್ವೆ, ಡಾ. ಪರಾಂಜಪೆ ಶ್ರೀನಿವಾಸ ಮುಂತಾದವರನ್ನು ಹೆಸರಿಸಬಹುದು.

'ಶಂ ಬಾ' ಜೋಶಿಯವರದು ಆದರ್ಶ ದಾಂಪತ್ಯವಾಗಿತ್ತು. ಅವರು ಬಾಳಿನ ನೋವುನಲಿವುಗಳಲ್ಲಿ ಒಂದಾಗಿ ಬಾಳಿದರು. ಶಂ ಬಾ ಅವರನ್ನು ಜೀವನದುದ್ದಕ್ಕೂ ಬೆಂಬಲಿಸಿ, ಪ್ರೀತಿಸಿದ ಪಾರ್ವತಿಬಾಯಿಯವರು ಪತಿಯನ್ನು ಸಾವಿನಲ್ಲೂ ಹಿಂಬಾಲಿಸಿದರು. ದಿನಾಂಕ ೨೮-೯-೧೯೯೧ ರಂದು ರುದ್ರಭೂಮಿ ಸೇರಿದ ಶಂ ಬಾ ದಂಪತಿಗಳು ಅನೇಕ ಸ್ಮೃತಿಚಿತ್ರಗಳನ್ನು ನಮ್ಮ ಮುಂದೆ ಬಿಟ್ಟುಹೋಗಿದ್ದಾರೆ. ಅವುಗಳಲ್ಲಿ 'ಶಂ ಬಾ' ಮಕ್ಕಳಾದ ಬಲ್ಲಾಳ ಹಾಗೂ ಮಧುಕರರು ಪ್ರತಿಭಾವಂತರು. ವಿಜ್ಞಾನಿಗಳಾಗಿ ಅಮೇರಿಕೆಯಲ್ಲಿ ಸಂಶೋಧನೆಯಲ್ಲಿ ತೊಡಗಿದ್ದಾರೆ. ಮಗಳು ವಿಮಲಾ ಧಾರವಾಡದ ಸಾಧನಕೇರಿಯಲ್ಲಿ ವಾಸವಾಗಿದ್ದಾರೆ.

ವೈಚಾರಿಕ ಭಾವನೆಯು 'ಶಂ ಬಾ' ಅವರ ತಾರುಣ್ಯದಲ್ಲಿಯೆ ಬೆಳೆಯಿತು. ಅದು ಅವರ ಬದುಕನ್ನು ಬೆಳಗಿಸಿತು. ಶಂಬಾ ಅವರ ಜೀವನದಲ್ಲಿ ನಡೆದ ಘಟನೆಗಳನ್ನು ಆಧರಿಸಿ ನಾಲ್ಕು ಹಂತಗಳಲ್ಲಿ ಅವರ ಜೀವನ ಚಿತ್ರವನ್ನು ರೇಖಿಸಬಹುದು.

ಹಂತ ೧ : ೧೮೯೬ ರಿಂದ ೧೯೧೪ ರ ವರೆಗಿನ ಹುಟ್ಟು, ಬಾಲ್ಯ ವಿದ್ಯಾಭ್ಯಾಸ. ಹುದ್ದೆಯನ್ನು ಸ್ವೀಕರಿಸಿ, ಗುರ್ಲಹೊಸೂರಿನಿದ ಮರಳಿ ಧಾರವಾಡಕ್ಕೆ ಬರುವವರೆಗೆ.

ಹಂತ ೨ : ೧೯೧೫ ರಂದ ೧೯೩೦ ರ ವರೆಗೆ ಕನ್ನಡ, ಇಂಗ್ಲೀಷ, ಸಂಸ್ಕೃತ ಭಾಷೆಗಳ ಅಧ್ಯಯನ. ರಾಷ್ಟ್ರೀಯ ಹೋರಾಟ, ಸ್ವಾತಂತ್ರ್ಯದ ಕಲ್ಪನೆ,

ಸಂಶೋಧನ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿದ್ದು.

ಹಂತ ೩ : ೧೯೩೦ ರಿಂದ ೧೯೪೯ ರ ವರೆಗೆ ಕನ್ನಡ ನಾಡು–ನುಡಿಗಳ ಬರವಣಿಗೆ, ಪುಸ್ತಕ ಪ್ರಕಟಣೆ, 'ಮಾಧವ ಬಲ್ಲಾಳ ಬಂಧುಗಳು' ಎಂಬ ಪ್ರಕಾಶನವನ್ನು ತೆಗೆದದ್ದು.

ಹಂತ ೪ : ೧೯೫೦ ರಿಂದ ೧೯೯೧ ರ ವರೆಗೆ ವೇದವ್ಯಾಸಂಗ, ಸಂಸ್ಕೃತಿ ಅಧ್ಯಯನದ ನಿಟ್ಟಿನಲ್ಲಿ ಅಖಿಲಭಾರತೀಯ ವಿಶಾಲ ವ್ಯಾಪ್ತಿಯ ಅಧ್ಯಯನ, ಜಾಗತಿಕ ಕ್ಷೇತ್ರದಲ್ಲಿ ಮನ್ನಣೆ. ಇದು ಶಂ ಬಾ ಅವರು ನಡೆದ ಸಾಂಸ್ಕೃತಿಕ ಹಾದಿ.

'ಶಂ ಬಾ' ಅವರು ಸ್ವಾತಂತ್ರ್ಯ ಬರುವ ಪೂರ್ವದಲ್ಲಿ ನಿವೃತ್ತಿ ಹೊಂದಿದ್ದರು. ಅವರು ಕರುಳುರೋಗದಿಂದ ಬಳಲುತ್ತಿದ್ದರು. ಆ ಬಾಧೆಯಲ್ಲೂ ಓದು, ಬರಹ ನಿಲ್ಲಲಿಲ್ಲ. ಒಮ್ಮೆ ಅವರ ಮನೆಗೆ ವೇದ ವಿದ್ವಾಂಸರಾದ ಬ್ರಹ್ಮರ್ಷಿ ದೈವದಾತರು ಬಂದಿದ್ದರು. ಅವರು ಸಾಕ್ಷಾತ್ ಪ್ರಾಚೀನ ಋಷಿಯಂತೆ ಇದ್ದರು. ಅವರು ಶಂ ಬಾ ಅವರು ಋಗ್ವೇದ ಸಂಹಿತೆಯ ಬಗೆಗೆ ಅಧ್ಯಯನ ಮಾಡಿದ್ದಾರೆಂಬ ಸುದ್ದಿ ಕೇಳಿ, ಇವರ ಬಳಿ ಬಂದಿದ್ದರು. ಶಂ ಬಾ ಆಶ್ಚರ್ಯಗೊಂಡು ಅವರಿಗೆ ನೀರನ್ನು ಕೊಟ್ಟು ಒಳಕ್ಕೆ ಕರೆದೊಯ್ದು ಹಾಲು–ಹಣ್ಣು ಕೊಟ್ಟರಂತೆ. ಅನಂತರ ತಮ್ಮ ಸಂಶೋಧನೆಯ ವಿಷಯವನ್ನು ತಿಳಿಸಿ, ಸತ್ಯಶೋಧನೆಗೆ ನೆರವಾಗಬೇಕೆಂದು ಕೇಳಿದರಂತೆ. 'ನಿಮ್ಮ ಮಾತಿನಲ್ಲಿ ನಿಜವಿದೆ' ಎಂದು ದೈವದಾತರು ಹೇಳಿದ ಮೇಲೆ ಶಂ ಬಾ ಅವರಿಗೆ ತಾನು ನಡೆಯುತ್ತಿರುವ ದಾರಿ ಹುರುಳುಳ್ಳದ್ದು ಎಂದು ಬಗೆದರಂತೆ.

ಶಂ ಬಾ ಅವರು ಪ್ರತಿನಿತ್ಯ ಪತ್ರಿಕೆ ಓದುತ್ತಿದ್ದರು. ಅವರು ಸಮಕಾಲೀನ ರಾಜಕೀಯದ ಬಗೆಗೆ ಬರೆಯದಿದ್ದರೂ ಬಂದವರೊಡನೆ

ಮಾತನಾಡುತ್ತಿದ್ದರು. ದೇಶದ ಇಂದಿನ ಸ್ಥಿತಿಗೆ ವರ್ತಮಾನ ಮಾತ್ರ ಕಾರಣವಲ್ಲ, ನಿನ್ನೆಯೂ ಕಾರಣ. ಈ ಕಾರಣ ತಿಳಿಯದೆ ನಾಳೆ ನಮಗೆ ಅರ್ಥವಾಗಲಾರದು ಎಂದು ಬಂದವರೊಡನೆ ಹರಟುತ್ತಿದ್ದರು. ಪ್ರತಿ ವರ್ಷ ಕಿರಿಯ ಮಗ ಹೊರದೇಶದಿಂದ ಬಂದಾಗ ಹತ್ತಾರು ಉಪಯುಕ್ತ ಪುಸ್ತಕಗಳನ್ನು ತರುತ್ತಿದ್ದನು. 'ಶಂಬಾ' ಅವುಗಳನ್ನು ಓದಿ ಮಗನ ನೆರವನ್ನು ಸ್ಮರಿಸಿಕೊಳ್ಳುತ್ತಿದ್ದರು. 'ಶಂಬಾ' ಮತ್ತು ಬೇಂದ್ರೆ ಭೇಟಿಗೆ ಡಾ. ಹುಯಿಲಗೋಳ ಅವರು ಕಾರಣರಾಗಿದ್ದರು. ಕವಿ ಬೇಂದ್ರೆ ಕೊನೆಯ ದಿನಗಳಲ್ಲಿ ಹಾಸಿಗೆ ಹಿಡಿದಾಗ 'ಶಂಬಾ' ತಮ್ಮ ನೆಚ್ಚಿನ ಗೆಳೆಯನನ್ನು ಕಂಡ ರೀತಿ ಹೃದಯಸ್ಪರ್ಶಿಯಾಗಿದೆ.

'ಶಂಬಾ' ಅವರನ್ನು ಹಲವಾರು ಪ್ರಶಸ್ತಿಗಳು ಅರಿಸಿಕೊಂಡು ಬಂದವು. ಆಗ ಶಂಬಾ ಅವುಗಳನ್ನು ನಿರ್ಲಿಪ್ತವಾಗಿ ಸ್ವೀಕರಿಸಿದರು. 'ಶಂಬಾ' ಅವರ ವೈಚಾರಿಕ ಚಿಂತನೆಯನ್ನು ಮೆಚ್ಚಿ, ಹಲವಾರು ಜನ ಅವರ ಸ್ನೇಹ ಬಯಸಿದರು. 'ಶಂಬಾ' ಅವರದು ಕೌಟುಂಬಿಕ ಬಳಗಕ್ಕಿಂತ ಸಮಾಜದ ಬಳಗ ಬಲು ದೊಡ್ಡದು.

'ಶಂಬಾ' ಜೋಶಿ ಅವರು ೩೦ಕ್ಕೂ ಹೆಚ್ಚು ಕೃತಿಗಳನ್ನು ನೀಡಿದ್ದರೂ ಅವುಗಳಲ್ಲಿ ನೇರವಾಗಿ ಜಾನಪದಕ್ಕೆ ಸಂಬಂಧಿಸಿದ ಕೃತಿ 'ಮಕ್ಕಳ ಒಡಪುಗಳು' ಮಾತ್ರ ಎಂದು ಹೇಳಬಹುದು. ಆದರೆ ಎಲ್ಲ ಕೃತಿಗಳಲ್ಲಿಯೂ ಜಾನಪದ ಅಂಶಗಳ ಸೂಕ್ಷ್ಮ ಎಳೆಗಳನ್ನು ಗುರುತಿಸಬಹುದು. 'ಶಂಬಾ' ಅವರ ಎಲ್ಲ ಕೃತಿಗಳಲ್ಲಿ ಮುಖ್ಯವಾಗಿ ಗಮನಿಸಬೇಕಾಗಿದ್ದು ಸಂಸ್ಕೃತಿ ಚಿಂತನೆಯೆ ಆಗಿದೆ. ಆ ಹಿನ್ನೆಲೆಯಲ್ಲಿ ಕೆಲವು ಪ್ರಮುಖ ಕೃತಿಗಳನ್ನು ಇಲ್ಲಿ ಪರಿಚಯಿಸಲಾಗಿದೆ.

ಕೃತಿಗಳು : 'ಶಂಬಾ' ಜೋಶಿ ಅವರ ಕೃತಿಗಳಲ್ಲಿ 'ಜೀವನ ಚರಿತ್ರೆಗಳು' ೨ (ಮಹರ್ಷಿ ಅರವಿಂದ ಘೋಷ ಇವರ ಸಂಕ್ಷಿಪ್ತ

ಚರಿತ್ರವು ೧೯೨೧, ಟಿಳಕ ಕಥಾಮೃತಸಾರ ೧೯೩೨). ಕನ್ನಡ ನುಡಿ–ಸಂಸ್ಕೃತಿ ಸಂಶೋಧನೆಗೆ ಸಂಬಂಧಿಸಿದವು ೫ (ಕಣ್ಮರೆಯಾದ ಕನ್ನಡ ೧೯೩೩, ಕರ್ನಾಟಕದ ವೀರ ಕ್ಷತ್ರಿಯರು ೧೯೩೬, ಕನ್ನಡ ನೆಲೆ ೧೯೩೯, ಎಡೆಗಳು ಹೇಳುವ ಕಂನಾಡ ಕತೆ ೧೯೪೭, ಕರ್ಣಾಟಕ ಸಂಸ್ಕೃತಿಯ ಪೂರ್ವ ಪೀಠಿಕೆ ೧೯೬೭). ಮರ್‍ಹಾಟ–ಸಂಸ್ಕೃತಿ ಸಂಶೋಧನೆಗೆ ಸಂಬಂಧಿಸಿದವು ೦೩ (ಮಹಾರಾಷ್ಟ್ರದ ಮೂಲ ೧೯೩೪, ಮರ್‍ಹಾಟ ಸಂಸ್ಕೃತಿ : ಕಾಹೀಸಮಸ್ಯಾ ೧೯೫೨, ಮರ್‍ಹಾಟೀ ಸಂಸ್ಕೃತಿ : ಕೆಲವು ಸಮಸ್ಯೆಗಳು ೧೯೯೦). ಭಾರತೀಯ ಸಾಂಸ್ಕೃತಿಕ ಸಂಶೋಧನೆಗೆ ಸಂಬಂಧಿಸಿದವು ೦೭, (ಶಿವರಹಸ್ಯ ೧೯೩೯, ಹಾಲುಮತ ದರ್ಶನ ೧೯೬೦, ಋಗ್ವೇದಸಾರ; ನಾಗಪ್ರತಿಮಾ ವಿಚಾರ ೧೯೭೧, ಸತ್ಶ್ಯ ಮತ್ತು ಸತ್ಯ ೧೯೭೫, ಭಾಷೆ ಮತ್ತು ಸಂಸ್ಕೃತಿ ೧೯೭೫, ಶ್ರೀಮತ್ ಭಗವದ್ಗೀತೆಯಲ್ಲಿ ಹುದುಗಿರುವ ರಾಜಯೋಗದ ಸ್ವರೂಪ ೧೯೭೭, ಸ್ಥಿತ್ಯಂತರ ೧೯೯೯). ಭಾರತೀಯ ಮತ್ತು ಜಾಗತಿಕ ಸಾಂಸ್ಕೃತಿಕ ಸಂಕೇತಗಳ ಸಂಶೋಧನೆಗೆ ಸಂಬಂಧಿಸಿದವು ೦೬ (ಪ್ರವಾಹ ಪತಿತರ ಕರ್ಮ ಹಿಂದೂ ಎಂಬ ಧರ್ಮ ೧೯೭೬, ದೈವಸ್ವತಮನು ಪ್ರಣೀತ ಮಾನದ ಧರ್ಮದ ಆಕೃತಿ ೧೯೭೯, ಬುಧನ ಜಾತಕ ೧೯೮೦, ಕಂನಾಡವರ ಸಂಸ್ಕೃತಿಯ ಗತಿ –ಸ್ಥಿತಿ ೧೯೮೧, ಬಿತ್ತಿದ್ದನ್ನು ಬೆಳಕೊ ೧೯೮೪, ಜೀವನ ಅರ್ಥಗ್ರಹಣ ಪದ್ಧತಿ ೧೯೮೬). ಭಾಷಾಭ್ಯಾಸ–ಭಾಷಾ ಶಾಸ್ತ್ರಕ್ಕೆ ಸಂಬಂಧಿಸಿದವು–೦೨), (ಕಂನುಡಿಯ ಹುಟ್ಟು ಅಥವಾ ನಿರುಕ್ತ ೧೯೩೭, ಕನ್ನಡ ನುಡಿಯ ಜೀವಾಳ ೧೯೪೪). ವೈಚಾರಿಕ ಸಾಮಾಜಿಕ ಚಿಂತನೆಗೆ ಸಂಬಂಧಿಸಿದವು ೦೭, (ರೂಢಿ ಹಾಗೂ ಭಾವಿಕ ಕಲ್ಪನೆಗಳು ೧೯೪೦, ದಾರಿಯ ಬುತ್ತಿ ೧೯೪೩, ಎದ್ದೇಳು ಕನ್ನಡಿಗಾ ಅಥವಾ ಅಸಂತೋಷವೇ ಏಳ್ಗೆಯ ಮೂಲ ೧೯೪೩, ಅಗ್ನಿ ವಿದ್ಯೆ ೧೯೪೬, ಯಕ್ಷಪ್ರಶ್ನೆ ಅಥವಾ ಬರಲಿರುವ

ಸಮಾಜ ೧೯೪೮, ಸಮಾಜ ದರ್ಶನ ೧೯೪೯, ಸಾಂಸ್ಕೃತಿಕ ಮೂಲದಲ್ಲಿನ ತಾತ್ವಿಕ ಚಿಂತನೆಗಳು ೧೯೭೮). 'ವಿಮರ್ಶೆ ಮೀಮಾಂಸೆಗೆ ಸಂಬಂಧಿಸಿದವು' ೦೨–(ಕರ್ಣನ ಮೂರು ಚಿತ್ರಗಳು ೧೯೪೭, ಸೌಂದರ್ಯ ವಿಚಾರ ೧೯೪೯). 'ಜನಪದ ಸಾಹಿತ್ಯ (ಮಕ್ಕಳ ಸಾಹಿತ್ಯ)ಕ್ಕೆ ಸಂಬಂಧಿಸಿದವು ೨ (ಮಕ್ಕಳ ಒಡಪುಗಳು ೧೯೪೦, ತಂತ್ರಗಾರ ಕಂಟಕರಾಯ ೧೯೪೩). ಅನುವಾದಗಳು ೨ (ಉಪನಿಷತ್ ರಹಸ್ಯ ೧೯೨೮, ಶ್ರೀಮದ್ ಭಗವದ್ಗೀತೆ–ಪುರುಷಾರ್ಥ ಬೋಧಿನಿ ಟೀಕೆ ಅಧ್ಯಾಯ–೧, ೧೯೪೪). ಸಂಕೀರ್ಣಕ್ಕೆ–೧, (ಶಂಬಾ ಜೋಶಿಯವರ ಆಯ್ದ ಲೇಖನಗಳು.

'ಶಂಬಾ' ಅವರ ಕೃತಿಗಳಲ್ಲಿ ಕನ್ನಡ–ಮರಾಠಿ ಕೃತಿಗಳಲ್ಲದೆ, ಮರಾಠಿಯಿಂದ ಅವರು ಅನುವಾದಿಸಿದ ಕೃತಿಗಳೂ ಸೇರಿವೆ. ಅನೇಕ ಬಿಡಿಬಿಡಿ ಲೇಖನಗಳು ನಾನಾ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಅವುಗಳನ್ನು ಸಂಗ್ರಹಿಸಿ ಶಂಬಾ ಜೋಶಿಯವರ ಆಯ್ದ ಲೇಖನಗಳು (೧೯೭೨) ಎಂಬ ಹೆಸರಿನಲ್ಲಿ ಮಲ್ಲೇಪುರಂ ಜಿ. ವೆಂಕಟೇಶ ಅವರು ಸಂಪಾದಿಸಿದ್ದು ಕನ್ನಡ ಪುಸ್ತಕ ಪ್ರಾಧಿಕಾರವು ಪ್ರಕಟಿಸಿದೆ.

ಸಾಂಸ್ಕೃತಿಕ ಸತ್ಯಗಳ ಹುಡುಕಾಟ : 'ಶಂಬಾ' ಅವರ ಆತ್ಮಾಭಿಮಾನ, ಪ್ರಾಮಾಣಿಕ ಹೋರಾಟ ಅಪರೂಪವಾದದ್ದು. ವಿಚಾರಗಳ ಅನ್ವೇಷಣೆಯಲ್ಲಿ ಕ್ರಿಯಾಶೀಲರಾಗಿದ್ದ 'ಶಂಬಾ' ಅವರು ಇತರರು ನಡೆದ ಹಾದಿಯಲ್ಲೂ ನಡೆಯದೆ, ತಾವೇ ಸಂಶೋಧನ ಮಾರ್ಗ ಸೃಷ್ಟಿಸಿದ್ದಾರೆ. ತೊಂಬತ್ತಾರನೆಯ ವರ್ಷದಲ್ಲೂ 'ಶಂಬಾ' ಬೌದ್ಧಿಕವಾಗಿ ಕಂಗೊಳಿಸುತ್ತಿದ್ದರು. ಕೊನೆಯ ಕ್ಷಣದವರೆಗೆ ಸಾಂಸ್ಕೃತಿಕ ಸತ್ಯಗಳ ಹುಡುಕಾಟದಲ್ಲಿ ಅವರು ತೊಡಗಿದ್ದು ಆಶ್ಚರ್ಯವೆನಿಸುತ್ತದೆ. ಓದು, ಬರಹ, ವಿಚಾರ ಅನ್ವೇಷಣೆಯಲ್ಲಿ ನಿರತರಾಗಿದ್ದ 'ಶಂಬಾ'

ಕನ್ನಡ ಸಂಶೋಧನ ಪರಂಪರೆಯ ಕ್ಷೇತ್ರದಲ್ಲಿ ಮಹತ್ವದ ಸಾಧನೆಮಾಡಿದ್ದಾರೆ.

'ಶಂಬಾ' ಜೋಶಿಯವರು ಸಂಶೋಧನೆಗೆ ತೊಡಗಿದ ಕಾಲವು ಕನ್ನಡ ನವೋದಯ ಸಾಹಿತ್ಯದ ಉತ್ಕರ್ಷದ ಕಾಲ. ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಸೃಜನಶೀಲತೆ ಪ್ರಕಟವಾಗುತ್ತಿದ್ದ ಸಂದರ್ಭದಲ್ಲಿ 'ಶಂಬಾ' ಸಂಶೋಧನೆಯ ಮಾರ್ಗವನ್ನು ಆರಿಸಿಕೊಂಡರು. ಆಗ ಮಹಾರಾಷ್ಟ್ರದಲ್ಲಿ ನಡೆಯುತ್ತಿದ್ದ ಸಾಂಸ್ಕೃತಿಕ ಚಟುವಟಿಕೆಗಳು 'ಶಂಭಾ'ರವರನ್ನು ಪ್ರೇರೇಪಿಸಿರಬೇಕು. 'ಶಂಬಾ' ಅವರ ಸಮಗ್ರ ಸಂಶೋಧನೆಯನ್ನು ಕನ್ನಡ ಸಂಸ್ಕೃತಿ, ಮರ್ಹಾಟಿ ಸಂಸ್ಕೃತಿ, ಹಿಂದೂ ಸಂಸ್ಕೃತಿ, ಮಾನವ ಸಂಸ್ಕೃತಿ ಎಂದು ಅದರ ಬೆಳವಣಿಗೆಯ ಮಾರ್ಗವನ್ನು ಕಂಡುಕೊಳ್ಳಬಹುದು. ಸತ್ಯವನ್ನು ಪ್ರತಿಪಾದಿಸುವದು ಸಂಶೋಧಕನ ಕೆಲಸ. ಸಂಶೋಧನೆಗೆ ಮುಖ್ಯವಾಗಿ ಬೇಕಾದುದು ಆಕರ ಸಾಮಗ್ರಿ. ಶಂಬಾ ಜೋಶಿ ಅವರು ಸಂಸ್ಕೃತಿ ಸಂಶೋಧನೆಗೆ ತೊಡಗುವಾಗ ಜನಾಂಗದ ಭಾಷೆ, ಆಹಾರ, ಸಂಪ್ರದಾಯ, ದೇವತಾರಾಧನೆ, ಮಾನವ ವಂಶಶಾಸ್ತ್ರ, ಸಮಾಜಶಾಸ್ತ್ರ, ಮಾನಸಶಾಸ್ತ್ರ, ಇತಿಹಾಸ ಹೀಗೆ ಹಲವು ಶಾಸ್ತ್ರ, ಸಾಮಗ್ರಿಗಳನ್ನಿಟ್ಟುಕೊಂಡು ಅವುಗಳ ಆಧಾರದಿಂದ ಸತ್ಯದ ಅನ್ವೇಷಣೆ ನಡೆಸಿದ್ದಾರೆ. ಹೀಗೆ ಸಂಸ್ಕೃತಿಯ ಹುಡುಕಾಟವೇ ಶಂಬಾ ಜೋಶಿ ಅವರ ಸಂಶೋಧನೆಯಾಗಿದೆ.

'ಶಂಬಾ' ಅವರು ತಮ್ಮ ಜೀವಿತದ ಮೊದಲ ಭಾಗವನ್ನು 'ಕನ್ನಡ-ಸಂಸ್ಕೃತಿ ಇತಿಹಾಸಗಳ ಭಾಷಿಕ ಅಧ್ಯಯನಕ್ಕೆ' ಮೀಸಲಾಗಿರಿಸಿದ್ದರು. ಅರವಿಂದ, ವಿವೇಕಾನಂದರ ಪ್ರಭಾವ, ಗಾಂಧೀಜಿ, ತಿಲಕರ ರಾಷ್ಟ್ರಭಕ್ತಿಯ ಪ್ರಚೋದನೆ ಅವರ ಮೇಲಾಯಿತು. ಅಸಹಕಾರ ಚಳುವಳಿಯಲ್ಲಿ ಆರು ತಿಂಗಳು ಗೃಹಬಂಧನ

ಅನುಭವಿಸಿದರು. ಮೊದಲು ಅರವಿಂದರ ತತ್ತ್ವಜ್ಞಾನದಿಂದ ಸ್ಫೂರ್ತಿ ಹೊಂದಿದ 'ಶಂಬಾ' ಅವರು ಅರವಿಂದರ ಜೀವನ ಕುರಿತು ಮೊದಲು ಗ್ರಂಥರಚನೆ ಮಾಡಿದರು.

ಮಹರ್ಷಿ ಅರವಿಂದ ಘೋಷ ಇವರ ಸಂಕ್ಷಿಪ್ತ ಚರಿತವು (೧೯೨೧): ಅರವಿಂದರ ಚರಿತ್ರೆ ಲೇಖಕರೇ ಹೇಳಿದಂತೆ ಸಂಕ್ಷಿಪ್ತ ಚರಿತ್ರೆ. ಇಲ್ಲಿ ಅರವಿಂದರ ಬದುಕಿನ ವಿವರಗಳಿಗಿಂತ ಹೆಚ್ಚಾಗಿ ಅರವಿಂದರ ಆಂತರ್ಯದ ಸಾಧನೆ, ತಾತ್ತ್ವಿಕ ನಿಲವು, ದರ್ಶನ ಮತ್ತು ಸಂದೇಶಗಳನ್ನು ಎತ್ತಿಹೇಳುವುದು ಈ ಕೃತಿಯ ಹಿರಿಮೆಯಾಗಿದೆ. ಪೀಠಿಕೆ ವಂಶವೃತ್ತ, ಅಧ್ಯಯನ, ಪೂರ್ವಾಶ್ರಮ, ದೇಶಸೇವೆ, ಯೋಗಗಳಲ್ಲಿ ಅರವಿಂದರ ವ್ಯಕ್ತಿತ್ವ-ಸಾಧನೆಗಳು ಚೆನ್ನಾಗಿ ನಿರೂಪಿತವಾಗಿವೆ.

ಕರ್ನಾಟಕ ಸಂಸ್ಕೃತಿಯ ವಿಕಾಸ : ಶಂಬಾ ಜೋಶಿ ಅವರ 'ಕಣ್ಮರೆಯಾದ ಕನ್ನಡ' (೧೯೩೩) ಮಹಾರಾಷ್ಟ್ರದ ಮೂಲ (೧೯೩೪), ಕಂನುಡಿಯ ಹುಟ್ಟು (೧೯೩೭), ಕನ್ನಡ ನೆಲೆ (೧೯೩೯), ಕನ್ನಡ ನುಡಿಯು ಜೀವಾಳ (೧೯೩೯). ಕರ್ನಾಟಕ ಸಂಸ್ಕೃತಿಯು ಪೂರ್ವಪೀಠಿಕೆ (೧೯೬೭), ಈ ಎಲ್ಲ ಗ್ರಂಥಗಳಲ್ಲಿ ಕರ್ನಾಟಕ ಸಂಸ್ಕೃತಿಯ ವಿಕಾಸಕ್ಕೆ ಸಂಬಂಧಿಸಿದ ಮೂಲಭೂತ ವಿಚಾರ, ಸಂಶೋಧನ ಸಾಮಗ್ರಿಯನ್ನು ನಾವು ಕಾಣುತ್ತೇವೆ.

ಕಣ್ಮರೆಯಾದ ಕನ್ನಡ (೧೯೩೩) : ಕನ್ನಡಿಗರಲ್ಲಿ ಅವರ ಸಂಸ್ಕೃತಿ ಪರಂಪರೆಯ ಬಗೆಗೆ ಸ್ವಾಭಿಮಾನ, ಆತ್ಮಪ್ರಜ್ಞೆಯನ್ನು ಬೆಳಸುವಲ್ಲಿ 'ಶಂಬಾ' ಅವರು ಮಾಡಿದ ಕಾರ್ಯ ಅದ್ವತೀಯವಾದುದು. ಕನ್ನಡ ಸಂಸ್ಕೃತಿಯ ಸಂಶೋಧನೆಯೇ ಅವರ ಅನ್ವೇಷಣೆಯ ಮೊದಲ ಹೆಜ್ಜೆಯಾಗಿದೆ. ಕನ್ನಡನಾಡು ಹರಿದು ಹಂಚಿಹೋಗಿದ್ದ ಕಾಲದಲ್ಲಿ,

ಕನ್ನಡಿಗರಲ್ಲಿ ಅಭಿಮಾನ ಶೂನ್ಯತೆ ಆವರಿಸಿದ್ದ ಸಂದರ್ಭದಲ್ಲಿ ಶಂಬಾ ಜೋಶೀಯವರು ಪತ್ರಿಕೆಗಳಲ್ಲಿ ಉದ್ದೀಪನಗೊಳಿಸುವ ಲೇಖನಗಳನ್ನು ಬರೆದು ಜನರನ್ನು ಜಾಗೃತಗೊಳಿಸಿದರು. ಅಂಥವುಗಳಲ್ಲಿ 'ಕಣ್ಮರೆಯಾದ ಕನ್ನಡವೂ ಒಂದು.

ಕರ್ನಾಟಕ ಏಕೀಕರಣಕ್ಕಿಂತ ಪೂರ್ವದಲ್ಲಿಯೇ ಶಂಬಾ ಜೋಶಿ ಅವರು ಕನ್ನಡ ನಾಡಿನ ವಿಸ್ತಾರ ಮೊದಲಿಗೆ ಎಲ್ಲಿತ್ತು? ಈ ಹೆಸರು ಬರಲು ಕಾರಣವೇನು? ಈ ಜನ ಎಲ್ಲಿಂದ ಬಂದರು? ಜನಜೀವನ, ಆಚಾರ-ವಿಚಾರಗಳ ವಿನಿಮಯ ಹೇಗೆ? ಯಾವ ಯಾವ ಸಂದರ್ಭದಲ್ಲಿ ಆಯಿತು? ಕವಿರಾಜಮಾರ್ಗಕಾರ ಕಾವೇರಿಯಿಂದ ಗೋದಾವರಿವರೆಗೂ ಇರುವ ನಾಡಿನ ಮೇರೆಯನ್ನು ಹೇಳುತ್ತಾನೆ. ಇದರ ವಾಸ್ತವ ಸ್ಥಿತಿ ಏನು? ಮಹಾರಾಷ್ಟ್ರದ ಧಾರ್ಮಿಕ ಗ್ರಂಥಗಳಲ್ಲಿ ಕನ್ನಡದ ಸುಳುವುಗಳು ದೊರಕುತ್ತವೆ. ಇದರ ಅರ್ಥವೇನು? ಇವೇ ಮೊದಲಾದ ಪ್ರಶ್ನೆಗಳು ತಲೆ ಎತ್ತಿದವು. ಆಗ ಶಾಸನ, ಕಾವ್ಯ, ಶಾಸ್ತ್ರ ಗ್ರಂಥಗಳ ಅಧ್ಯಯನಕ್ಕೆ ಬುನಾದಿ ಹಾಕಿದರು. ಇವುಗಳ ಅಧ್ಯಯನ ರೂಪದಿಂದ ಬಂದ ಮೊದಲ ಗ್ರಂಥ ಇದಾಗಿದೆ.

ಕನ್ನಡದ ನೆಲೆ (೧೯೩೯) : 'ಕಣ್ಮರೆಯಾದ ಕನ್ನಡ' ಹಾಗೂ 'ಕನ್ನಡದ ನೆಲೆ' ಇವೆರಡೂ ಸಂಶೋಧನ ಗ್ರಂಥಗಳು. ಕನ್ನಡ ಸಂಸ್ಕೃತಿಯನ್ನು, ಕನ್ನಡ ಜನರನ್ನು, ವಿಶಿಷ್ಟವಾದ ಅವರ ಶೈಲಿಯನ್ನು ಗುರುತಿಸುವ ಮೊದಲ ಗ್ರಂಥಗಳಾಗಿವೆ. 'ಶಂಬಾ' ಅವರು ಮೊಟ್ಟ ಮೊದಲ ಬಾರಿಗೆ ಕನ್ನಡ ಸಂಶೋಧನೆಯ ಸಂದರ್ಭದಲ್ಲಿ ಅಂತರ ಶಾಸ್ತ್ರೀಯ ಅಧ್ಯಯನವನ್ನು ಸಮರ್ಥವಾಗಿ ಬಳಸಿದರು. 'ಶಂಬಾ' ಅವರಿಗೆ ಕನ್ನಡ ಸಂಸ್ಕೃತಿಯ ಅಧ್ಯಯನವೆಂದರೆ ಮನುಷ್ಯನ ಬದುಕಿನ ಅಂತಃಸತ್ವವನ್ನು ಅರಿಯುವದೇ ಆಗಿದೆ. ಭಾಷಿಕ ಸಂಕೇತಗಳು,

ದೈವತಗಳು, ಸಾಂಕೇತಿಕಪರಿಭಾಷೆ, ಸಂಪ್ರದಾಯ, ಸ್ಥಳನಾಮ, ಆಚರಣೆಗಳು–ಹೀಗೆ ಸಂಸ್ಕೃತಿ ರೂಪಗೊಳಸಿದ ಜೀವನ ವಿಧಾನಗಳೆಲ್ಲ ಸಹಜವಾಗಿಯೇ 'ಶಂಬಾ' ಅವರ ಕನ್ನಡ ಸಂಸ್ಕೃತಿಯ ಅಧ್ಯಯನದ ಸಂದರ್ಭದಲ್ಲಿ ಅರಿಯುವ ಸಾಧನಗಳಾಗಿ ಬಳಕೆಯಾಗಿವೆ. ಹೀಗೆ ಈಗ ಕಣ್ಮರೆಯಾಗಿರುವ ವಿಸ್ತಾರ ಕನ್ನಡ ಪ್ರದೇಶ, ಅದರ ಸಂಸ್ಕೃತಿಯನ್ನು ರೂಪಿಸಿದ ಜನಾಂಗ, ನಂತರ ಅದು ಕಣ್ಮರೆಯಾಗಲು ಕಾರಣ ತಿಳಿಸಿದ್ದಾರೆ. ಹೀಗೆ ಕನ್ನಡ ಸಂಸ್ಕೃತಿಯ ಚರಿತ್ರೆಯ ಒಂದು ಸ್ವರೂಪವನ್ನು ಮೇಲಿನ ಕೃತಿಗಳಲ್ಲಿ ಶಂಬಾ ಅವರು ಗುರುತಿಸಿದ್ದಾರೆ.

ಕನ್ನಡ ಸಂಸ್ಕೃತಿಯ ಪೂರ್ವ ಪೀಠಿಕೆ (ಪ್ರ. ಭಾಗ ೧೯೬೭) : 'ಕನ್ನಡ ನೆಲೆ'ಯಲ್ಲಿ ಕನ್ನಡ ಮೂಲಿಗರು ಯಾರು? ಕಂನುಡಿಯ ಉತ್ಪತ್ತಿ, ಬೆಳವಣಿಗೆ ಕುರಿತು ವಿಶ್ಲೇಷಿಸಿದರು. ಇವೆಲ್ಲವುಗಳನ್ನು ಬಳಸಿಕೊಂಡು ಹೊಸದನ್ನು ಜೋಡಿಸಿ ಕನ್ನಡನಾಡು ನುಡಿ, ಕುರಿತಾದ ವಿಷಯಕ್ಕೆ ವೇದ, ಉಪನಿಷತ್ತು, ಪುರಾಣ, ಸ್ಮೃತಿ, ಸ್ಥಳವ್ಯಾಸಂಗ ಮುಂತಾದವುಗಳನ್ನು ಸೇರಿಸಿಕೊಂಡು "ಕರ್ನಾಟಕ ಸಂಸ್ಕೃತಿಯ ಪೂರ್ವಪೀಠಿಕೆ" ಎಂಬ ಬೃಹತ್ ಕೃತಿಯನ್ನು ರಚಿಸಿದರು.

ಸುಮಾರು ೧೦–೧೧ ನೆಯ ಶತಮಾನದವರೆಗಿನ ಭಾಷೆ ಹಾಗೂ ಸಂಸ್ಕೃತಿ ಆಕೃತಿಯೇ ಇಲ್ಲಿನ ವಿವೇಚನೆಯ ವಿಷಯವಾಗಿದೆ ಎಂದು ತಮ್ಮ ಮುನ್ನುಡಿಯಲ್ಲಿ ಶಂಬಾರವರು ಹೇಳಿದ್ದಾರೆ. ಉಳಿದ ಸಂಸ್ಕೃತಿ ಚಿಂತಕರಿಗಿಂತ 'ಶಂಬಾ' ಅವರು ಭಿನ್ನನೆಲೆಯಲ್ಲಿ ನಿಲ್ಲುತ್ತಾರೆ. ಪೌರ್ವಾತ್ಯ ವಿದ್ವಾಂಸರು ಶಾಸನ, ತಾಮ್ರಪಟ, ಪುರಾತತ್ವ ಅನ್ವೇಷಣೆಯಿಂದ ಕನ್ನಡನಾಡ ಸಂಸ್ಕೃತಿಯನ್ನು ಕುರಿತು ಸಂಶೋಧಿಸಿದರೆ, ಶಂಬಾ ಅವರು ಶಾಸ್ತ್ರೋಪಕರಣಗಳಿಂದ ಅದಕ್ಕೂ ಹಿಂದಿನ ಕತ್ತಲೆಯ ಖಂಡವನ್ನು ಶೋಧಿಸಲು ತೊಡಗುತ್ತಾರೆ. ಇದು

'ಶಂಬಾ' ಅವರ ಅಧ್ಯಯನದ ವಿಧಾನದಂತೆಯೇ ಪ್ರಸ್ತುತ ಕೃತಿಯ ಹಿರಿಮೆಯೂ ಸಾಧನೆಯೂ ಆಗಿದೆ. ಈ ಗ್ರಂಥಕ್ಕ ಕೇಂದ್ರ ಸಾಹಿತ್ಯ ಅಕಾಡೆಮಿ ಬಹುಮಾನ ಲಭಿಸಿದೆ.

ಕಂನುಡಿಯ ಹುಟ್ಟು (೧೯೩೭) : 'ಕಂನುಡಿಯ ಹುಟ್ಟು', 'ಕನ್ನಡ ನುಡಿಯ ಜೀವಾಳ' (೧೯೪೪) ನಲ್ವತ್ತರ ದಶಕದ ಆಸುಪಾಸಿನಲ್ಲಿ ಪ್ರಕಟವಾಗಿವೆ. 'ಕನ್ನಡ ನುಡಿಯ ಜೀವಾಳ'ವು ಪ್ರಕಟವಾದ ವರ್ಷ ಉಲ್ಲೇಖವಾಗಿರದಿದ್ದರೂ ಅದರ ಭಾಷೆ, ನಿರೂಪಣೆಗಳನ್ನು ಗಮನಿಸಿದರೆ 'ಕಂನುಡಿಯ ಹುಟ್ಟಿ'ನ ಕೆಲವೇ ವರ್ಷಗಳ ಅಂತರದಲ್ಲಿ ಪ್ರಕಟವಾಗಿದೆ ಎಂದು ಊಹಿಸಬಹುದಾಗಿದೆ. ಇವೆರಡು ಕನ್ನಡ ಭಾಷೆಗೆ ಸಂಬಂಧಿಸಿದ ಕೃತಿಗಳು.

ಕನ್ನಡ ಭಾಷೆಯ ಒಳ ಸುಳಿವುಗಳನ್ನು ಗುರುತಿಸುವ ಭಾಷಾಶಾಸ್ತ್ರ ವ್ಯಾಸಂಗದ ಹಿನ್ನೆಲೆಯಲ್ಲಿ 'ಕಂನುಡಿಯ ಹುಟ್ಟು' ಗ್ರಂಥ ರಚನೆಯಾಗಿದೆ. ಈ ಗ್ರಂಥವು ಶಾಸ್ತ್ರೀಯ ವ್ಯಾಕರಣ ಹಿನ್ನೆಲೆಯಲ್ಲಿ ಭಾಷೆಯ ಬಗೆಗೆ, ಭಾಷೆಯನ್ನು ಬೆಳೆಸುವ ಬಗೆಗೆ ಆಸಕ್ತಪೂರ್ಣವಾದ ಕಾಳಜಿಯನ್ನು ಇದು ತೋರಿಸುತ್ತದೆ. 'ಕಂನುಡಿಯ ಹುಟ್ಟು' ಎಂಬಲ್ಲಿ ಭಾಷಿಕ ಮೂಲ ಮತ್ತು ಬೆಳವಣಿಗೆಯನ್ನು ಸ್ಪಷ್ಟವಾಗಿ ಗುರುತಿಸಿದ್ದಾರೆ. 'ಶಂಬಾ' ಅವರ ಸ್ವತಂತ್ರ ಮನೋಧರ್ಮ ಇಲ್ಲಿ ಎದ್ದುಕಾಣುತ್ತದೆ. ಭಾಷೆಯ ರಚನೆ ಹಾಗೂ ವಿನ್ಯಾಸಗಳ ಬಗೆಗೆ ಅವರ ವಿಶಿಷ್ಟ ಮನೋಧರ್ಮವನ್ನು ಈ ಕೃತಿ ಎತ್ತಿಹೇಳುತ್ತದೆ.

ಮಹಾರಾಷ್ಟ್ರದ ಮೂಲ (೧೯೩೪) : ಈ ಗ್ರಂಥವನ್ನು ಬರೆದಾಗ ಮಹಾರಾಷ್ಟ್ರದಲ್ಲಿ ಎಂಥ ಪ್ರತಿಕ್ರಿಯೆ ಸಿಗಬಹುದೆಂಬ ಕಾರಣದಿಂದ 'ನವಭಾರತ'ಕ್ಕೆ ಲೇಖನಗಳನ್ನು ಬರೆದರು. ಅಲ್ಲಿ ವ್ಯಾಪಕವಾಗಿ ಚರ್ಚೆ ನಡೆದು, ಶಂಬಾ ಅವರ ವಿಚಾರಗಳಲ್ಲಿ ಸತ್ಯವಿದೆ ಎಂಬ ವಿಚಾರವನ್ನು

ಮಹಾರಾಷ್ಟ್ರದ ವಿದ್ವಾಂಸರು ಒಪ್ಪಿಕೊಂಡರು. ಶ್ರೀ ಸ. ಜ. ಭಾಗವತರ ಒತ್ತಾಯದಿಂದ ೧೯೨೫ ರಲ್ಲಿ ಈ ವಿಷಯ ಕುರಿತು ಮರಾಠಿಯಲ್ಲಿ ಶಂಬಾ ಅವರು ಗ್ರಂಥವನ್ನು ಬರೆದರು. ಮುಂಬಯಿಯ ಮರಾಠಿ ಸಂಗ್ರಹಾಲಯದವರು ಆ ವರ್ಷದ ಸರ್ವಶ್ರೇಷ್ಠ ಗ್ರಂಥವನ್ನು ಗುರುತಿಸಿ 'ಶಂಬಾ' ಅವರನ್ನು ಸನ್ಮಾನ ಮಾಡಿದರು. ಇದರಿಂದ 'ಶಂಬಾ' ಅವರ ಹೆಸರು ಮಹಾರಾಷ್ಟ್ರದಲ್ಲಿ ಸ್ಥಿರವಾಯಿತು.

ಮರ್ಹಾಠಿ ಸಂಸ್ಕೃತಿ : ಕಾಹೀಸಮಸ್ಯಾ (ಮರಾಠಿ ೧೯೫೨) ಎಂಬ ಮರ್ಹಾಠಿಯ ಬೃಹತ್ ಗ್ರಂಥವನ್ನು ಪ್ರಕಟಿಸಿ, ಅದರ ಅನ್ವೇಷಣೆಯನ್ನು ಪ್ರಕಟಿಸಿದರು. ಕರ್ನಾಟಕ ಮರ್ಹಾಠಿ ಸಂಸ್ಕೃತಿಯ ಶೋಧದ ಮೂಲಕ 'ಶಂಬಾ' ಜೋಶಿ ಅವರು ಇವೆರಡೂ ಭಾಷೆ ಸಂಸ್ಕೃತಿಗಳ ಸಂಬಂಧವನ್ನು ಜೋಡಿಸಲು ಪ್ರಯತ್ನಿಸಿದರು. ಹೀಗೆ ಈ ಎಲ್ಲ ಕೃತಿಗಳಲ್ಲಿ ಕರ್ನಾಟಕ ಸಂಸ್ಕೃತಿಯ ವಿಕಾಸಕ್ಕೆ ಸಂಬಂಧಿಸಿದ ಮೂಲಭೂತ ವಿಚಾರಗಳನ್ನು ಕಾಣುತ್ತೇವೆ.

ಭಾರತೀಯ ಸಂಸ್ಕೃತಿಯ ವಿಕಾಸ

ಹಾಲುಮತ ದರ್ಶನ (೧೯೬೦) : ಭಾಷೆ–ಸಂಸ್ಕೃತಿ, ಧರ್ಮ ತತ್ತ್ವಜ್ಞಾನಗಳ ಬಗೆಗೆ ಅಧ್ಯಯನ ಮಾಡಿದ್ದರ ಫಲವಾಗಿ ೧೯೬೦ ರಲ್ಲಿ ಹಾಲುಮತ ದರ್ಶನ ಬೆಳಕಿಗೆ ಬಂದಿತು. ಇದರಲ್ಲಿ ಶೈವ ಹಾಗೂ ವೈಷ್ಣವ ಸಮಸ್ಯೆಗಳ ಮೂಲಬೇರನ್ನು ಕುರಿತು ವಿವರವಾಗಿ ಚರ್ಚಿಸಿದ್ದಾರೆ. 'ಶಂಬಾ' ಅವರ ತಾತ್ವಿಕ ಹಾಗೂ ವೈಚಾರಿಕ ಮನೋಧರ್ಮದ ಕುರುಹುಗಳು ಕರ್ನಾಟಕ ಸಂಸ್ಕೃತಿಯ ಪಾತಳಿಯಿಂದ ಭಾರತೀಯ ಸಂಸ್ಕೃತಿ ಮತ್ತು ಹೆಜ್ಜೆಗುರುತು ಇಟ್ಟಿದ್ದನ್ನು ನಾವಿಲ್ಲಿ ಗುರುತಿಸುತ್ತೇವೆ.

ಋಗ್ವೇದ ಸಾರ : ನಾಗಪ್ರತಿಮಾ ವಿಚಾರ (೧೯೭೧) : ಕೃತಿಯಲ್ಲಿ ನಮ್ಮ ಜೀವನ ಸಂಸ್ಕೃತಿಯನ್ನು ಅಧಃಪಾತಕ್ಕೆ ತಳ್ಳಿರುವ ಹಾಗೂ ತಳ್ಳುತ್ತಿರುವ ಸಂಗತಿಗಳು ಯಾವುವು? ಋಗ್ವೇದದಲ್ಲಿ ಸರ್ಪಪೂಜೆ ಇರಲಿಲ್ಲ; ಆದರೆ ಸಾಂಕೇತಿಕವಾಗಿ ಸರ್ಪಾರಾಧನೆ ಅಲ್ಲಿ ಉಂಟು. ಇದು ಏನನ್ನು ಸಂಕೇತಿಸುತ್ತದೆ? ಹಿಂದೂ ಎಂಬ ಪದ ಹೇಗೆ ಬಂತು? ನಮ್ಮ ನಾಡಿನ ಹೆಸರು ಬಂದದ್ದು ಹೇಗೆ? ಈ ಪ್ರಶ್ನೆಗಳು ಆ ಗ್ರಂಥದ ಮೂಲಕ ಕಾಣಿಸಿಕೊಂಡವು ಇದಕ್ಕೆ ಕಾರಣವಾದ ಮೀಮಾಂಸೆಯನ್ನು ತಿಳಿಯಬೇಕೆಂಬ ಹಂಬಲವು ಉಂಟಾಯಿತು.

ಭಗವದ್ಗೀತೆಯಲ್ಲಿ ಹುದುಗಿರುವ ರಾಜಯೋಗದ ಸ್ವರೂಪ (೧೯೭೭): 'ಶ್ರೀಮತ್ ಭಗವದ್ಗೀತೆಯಲ್ಲಿ ಅಡಗಿರುವ ರಾಜಯೋಗದ ಸ್ವರೂಪ' ಎನ್ನುವುದು, ಕೇವಲ ಮುವತ್ತೈದು ಪುಟಗಳ ಭಗವದ್ಗೀತೆಯನ್ನು ಕುರಿತ ಶಂಬಾ ಅವರ ಪ್ರಬಂಧ. ಶಂಬಾ ಅವರ ಸಾಂಸ್ಕೃತಿಕ ಸತ್ಯಾನ್ವೇಷಣೆಯಲ್ಲಿ 'ಹಾಲುಮತ ದರ್ಶನ', 'ಋಗ್ವೇದ ಸಾರ'ದ ನಂತರ ಈ ಪ್ರಬಂಧವೇ ಮಹತ್ವದ ಘಟ್ಟವೆಂದು ಶಂಬಾ ಅವರ ಪುಸ್ತಕದ ಅರಿಕೆಯಲ್ಲಿ ಹೇಳಿದ್ದಾರೆ. ಇದು ಗಾತ್ರದಲ್ಲಿ ಪುಟ್ಟದಾದರೂ 'ಶಂಬಾ'ಅವರ ಸಾಂಸ್ಕೃತಿಕ ಸತ್ಯಾನ್ವೇಷಣೆಯಲ್ಲಿ ಇದು ಕೇಂದ್ರಸ್ಥಾನದಲ್ಲಿದೆ.

ಭಾರತೀಯ ಚಿಂತನೆಯಲ್ಲಿ ವೇದದ ನಂತರ ಆದ ಬೆರಕೆಯನ್ನು, ಆ ಬೆರಕೆಯ ಕಣ್ಕಟ್ಟು ಪ್ರಧಾನವಾಗಿ ಉಪನಿಷತ್ತುಗಳ ಮೂಲದ ರಾಮಾಯಣ, ಮಹಾಭಾರತ, ಪುರಾಣ-ಕಾವ್ಯ-ಶಾಸ್ತ್ರಗಳಲ್ಲೂ ಹರಿದದ್ದನ್ನು, ಅಲ್ಲಿ ಭಗವತ್ ಸಂಪ್ರದಾಯವು ಸಮಾಯಾಚಾರನಿಷ್ಠವಾಗಿರುವುದನ್ನು ತೋರಿಸಿಕೊಡುವುದೇ 'ಶಂಬಾ' ಅವರ ಮುಂದಿನ ಎಲ್ಲ ಕೃತಿಗಳ ಉದ್ದೇಶವಾಗಿದೆ. ಇಡೀ ಭಾರತೀಯ

ಚಿಂತನೆಗೆ ವ್ಯಾಪಿಸಿದ ಈ ಮಾದರಿಯನ್ನು ಕೃಷ್ಣಕಾರಸ್ಥಾನವೆಂದು ಕರೆದಿದ್ದಾರೆ. ಇದರ ಸ್ಪಷ್ಟ ದಾಖಲೆ ಭಾರತೀಯ ಚಿಂತನೆಯ ಮೂಖ್ಯ ಘಟಕವಾದ ಭಗವದ್ಗೀತೆಯಲ್ಲಿದೆ.

ಭಾರತೀಯ ಮತ್ತು ಜಾಗತಿಕ ಸಂಸ್ಕೃತಿಯ ವಿಕಾಸ

ಪ್ರವಾಹ ಪತಿತರ ಕರ್ಮ ಹಿಂದೂ ಎಂಬ ಧರ್ಮ (೧೯೭೬) : ಈ ಕೃತಿಯಲ್ಲಿ ಮಾನವನು ತನ್ನ ಬಾಳಿನ ಉದ್ದಕ್ಕೂ ಹೇಗೆ ಪ್ರವಾಹಪತಿತನಾಗಿ ಸಾಗಿದ್ದಾನೆಂಬುದನ್ನು ವಿವರಿಸಿದರು. 'ಹಿಂದೂ' ಎಂಬ ಪದದ ಆಶಯದ ಬಗೆಗೆ ದೀರ್ಘವಾದ ಚರ್ಚೆಮಾಡಿದರು. ಇದಕ್ಕಾಗಿ ಅವರು ವೇದೋಪನಿಷತ್ತುಗಳಿಂದ ಹಿಡಿದು ಪಾಶ್ಚಾತ್ಯರ ಮನಶಾಸ್ತ್ರದವರೆಗಿನ ಸಹಾಯವನ್ನು ಪಡೆದು ಹೊಚ್ಚ ಹೊಸದಾಗಿ ಅನೇಕ ವಿಷಯಗಳನ್ನು ಮೊದಲಬಾರಿಗೆ ಪ್ರಕಟಿಸಿದರು. ವಿವಸ್ವನ್ ಮತ್ತು ಸ್ವಾಯಂಭುವ ಈ ಇಬ್ಬರು ಮನುಗಳಲ್ಲಿರುವ ಆಚಾರ-ವಿಚಾರ ಆಕೃತಿ-ಆಶಯಗಳ ಸ್ವರೂಪವನ್ನು ಚೆನ್ನಾಗಿ ಗ್ರಹಿಸಿದ್ದಾರೆ. ಈ ಎರಡರ ಧಾರಣಾತ್ಮಕ ಹಿನ್ನೆಲೆಯಲ್ಲಿ ಸಂಸ್ಕೃತಿ ಅಧ್ಯಯನ ಚೆನ್ನಾಗಿ ಮನವರಿಕೆಯಾಗುತ್ತದೆಂಬ ಆಶಯ ಏನಿದೆಯೋ ಅದು ಚಾರಿತ್ರಿಕ ಕಾಲ ಸಂದರ್ಭ ಹಾಗೂ ಮಾನವನು ತನ್ನ ಬಾಳಿನ ಇತಿಮಿತಿಗಳನ್ನು ಅರಿತು ನಡೆಯುವ ನೆಲೆಯ ಬಳಿಗೆ ಹೋಗುವುದು ಸಮಂಜಸವಾಗಿದೆ.

'ಬುಧನ ಜಾತಕ' (೧೯೮೦) : ಈ ಕೃತಿಯನ್ನು ೧೯೮೦ ರಲ್ಲಿ ಪ್ರಕಟಿಸಿದ್ದಾರೆ. ಆ ವೇಳೆಗೆ ಸಾಂಸ್ಕೃತಿಕ ಚಿಂತನೆಯ ಕ್ಷೇತ್ರದಲ್ಲಿ ಅವರ ಅನೇಕ ಕೃತಿಗಳು ಪ್ರಕಟವಾಗಿದ್ದವು. ಅವರು ತಮ್ಮ ಕೃತಿ ಪರಂಪರೆಯಲ್ಲಿ ಒಂದು ಭದ್ರ ನೆಲೆಯನ್ನು ರೂಪಿಸಿಕೊಂಡಿದ್ದರು. ಈ ಹಿನ್ನೆಲೆಯಲ್ಲಿ 'ಬುಧನ ಜಾತಕ' ಪ್ರಕಟವಾಗಿದೆ.

ಇದರಲ್ಲಿ ಋಷಿ-ಮುನಿ; ಪ್ರಜ್ಞೆ, ಬುದ್ಧಿ; ಜೀವನ-ಜೀವಿತ,

ಮನುಜತ್ವ-ಪರತ್ವ, ಸೂರ್ಯ-ಚಂದ್ರ ಈ ಸಾಂಸ್ಕೃತಿಕ ಪರಿಭಾಷೆಗಳಲ್ಲಿರುವ ಅಂತರವನ್ನು ಕುರಿತು ಹಲವು ಶಾಖೆಗಳ ನೆರವಿನಿಂದ ಅಧ್ಯಯನ ನಡೆಸಿದರು. ಇದರ ಫಲವಾಗಿ ಅವರ ಬರಹದಲ್ಲಿ ಅರ್ಥಗ್ರಹಣ ಪದ್ಧತಿಯೊಂದು ರೂಪುಗೊಂಡಿತು. ಅವರ ಕೃತಿಗಳಲ್ಲಿ ರೂಪಿಸಿದ ಅರ್ಥಗ್ರಹಣ ಪದ್ಧತಿಯೊಂದು ಅವರ 'ಭಾರತೀಯ ಪ್ರಾಚ್ಯೇತಿಹಾಸ ಶಾಸ್ತ್ರ'ಕ್ಕೆ ಕೊಟ್ಟಿರುವ ಅಪೂರ್ವ ಕೊಡುಗೆಯೆಂದು ಸ್ಪಷ್ಟವಾಗಿ ಹೇಳಬಹುದು. ಬುದ್ಧಿ ಮತ್ತು ಪ್ರಜ್ಞೆ ಇದ್ದ ಅಂತರವನ್ನು ತಿಳಿಯಲಾಗಿದೆ. ಇದು ನಷ್ಟವಾದುದನ್ನು ಆಧುನಿಕ ಮನಃಶಾಸ್ತ್ರದ ಮೂಲಕ ಎತ್ತಿತೋರಿಸಿದರು. ಆಚಾರ-ವಿಚಾರಗಳನ್ನು ಬುದ್ಧಿಗೆ ಅಧೀನಗೊಳಿಸಿ ಬಾಳಿದರೆ ಎಂಥ ಆಶಯುಗಳೂ ರೂಪುಗೊಳ್ಳುತ್ತವೆ ಎಂಬುದನ್ನು 'ಬುಧನ ಜಾತಕ'ದಲ್ಲಿ ಐನ್‌ಸ್ಟೈನ್, ರಸೆಲ್ಲರ ಪರಿಭಾಷಾ ಸಂಕೇತ ಸೂತ್ರದಿಂದ ಅವರು ನಿರೂಪಿಸಿದರು. ಭಾಷೆಯು ಮೈದೋರಲು ಬುದ್ಧಿ ಕಾರಣವಾಗಿರದೆ ಪ್ರಜ್ಞೆ ಕಾರಣವಾಗಿದೆ. ಇದರಿಂದ ಜೀವನ ಅಥವಾ ಸಂಸ್ಕೃತಿ ಅರಿಕೆಗೆ ಬರುತ್ತದೆ ಎಂಬ ಸಂಗತಿಯನ್ನು 'ಶಂಬಾ' ಅವರು ಸ್ಪಷ್ಟವಾಗಿ ಜನರೆದುರಿಗೆ ನಿರೂಪಿಸಿದರು.

ಬಿತ್ತಿದ್ದನ್ನು ಬೆಳಕೊ (೧೯೮೪) : ಸಾಂಸ್ಕೃತಿಕ ಗ್ರಂಥವಾಗಿದ್ದ ಪುರಾತನರು ಕಂಡ ಮಾನವನ ಬಾಳುವೆಯ ಇತಿ-ಮಿತಿಗಳನ್ನು ತುಂಬಾ ವಿಸ್ತಾರವಾಗಿಯೇ ನಿರೂಪಿಸುತ್ತದೆ. ಕಂನಾಡಿನ ಮಟ್ಟಿಗೆ ಮಾತ್ರವಲ್ಲ, ಜಾಗಿತಕ ಮಟ್ಟದ ನೆಲೆಗೂ ತಾತ್ತ್ವಿಕ ನೆಲೆಯನ್ನಾಗಿ ಇದು ವಿಸ್ತರಿಸುತ್ತದೆ. ಹೀಗಾಗಿ 'ಶಂಬಾ' ಅವರು ಇಲ್ಲಿ ಮಾನವ ಜನಾಂಗದ ಸ್ಮೃತಿಯನ್ನೂ ಅವರ ನೆಲೆ-ಬೆಲೆಗಳನ್ನೂ ಹಿಡಿದಿಟ್ಟ ಚಿಂತನಶೀಲ ಸಂಸ್ಕೃತಿಶೋಧಕರಾಗಿ ಕಾಣುತ್ತಾರೆ.

ಜನಪದ ಸಾಹಿತ್ಯ ವಿಕಾಸ : ಮಕ್ಕಳ ಸಾಹಿತ್ಯ (೧೯೪೦) : ಪ್ರಜ್ಞಾವಂತ ಜನಸಮುದಾಯವನ್ನು ಎಚ್ಚರಿಸುವ 'ಶಂಬಾ' ಅವರ ಲೇಖನಿ; 'ಮಕ್ಕಳ ಒಡಪು' ಎಂಬ ಕೃತಿಯನ್ನು ರಚಿಸುವುದರ ಮೂಲಕ ಬಾಲಪ್ರಪಂಚವನ್ನು ಪ್ರವೇಶಿಸಿದೆ. ಮಕ್ಕಳ ಒಡಪುಗಳನ್ನು ಏಕೆ ಓದಬೇಕು? ಎಂದು ವಿಶ್ಲೇಷಿಸುತ್ತ ಅವರೆ ಹೇಳಿರುವಂತೆ " ಈ ಕೃತಿಯು ಮಕ್ಕಳಲ್ಲಿ ಹುದುಗಿರುವ ಸುಪ್ತಪ್ರತಿಭೆಯನ್ನು ಚೇತರಿಸುತ್ತದೆ. ಕಲ್ಪನಾಸಾಮರ್ಥ್ಯ ಮತ್ತು ಚಿತ್ರಕವಿತ್ವಗಳಿಗೆ ಚಾಲನೆಯನ್ನು ನೀಡುತ್ತದೆ. ಸೂಕ್ಷ್ಮನಿರೀಕ್ಷಣಾ ಸಾಮರ್ಥ್ಯ ಮತ್ತು ವಿಚಾರ ವಿಮರ್ಶನಾ ಶಕ್ತಿಯನ್ನು ಬೆಳೆಸುತ್ತದೆ. ಒಳ್ಳೆಯ ಭಾಷಾ ಶೈಲಿ, ತೂಕದ ಮಾತು, ಪದೌಚಿತ್ಯ, ಶಬ್ದಾಲಂಕಾರ, ಅರ್ಥಾಲಂಕಾಗಳ ಅರಿವನ್ನು ಮೂಡಿಸುತ್ತದೆ. ನೇರವಾದ ಮಾತಿಗೆ ಮೀರಿದ ಒಡಪಿನ ರೂಪದ, ಸತ್ಯದ ಮನವರಿಕೆ ಮಾಡಿಕೊಡುತ್ತದೆ. ಸಹಜತೆಯ ಅರಿವು ಮತ್ತು ವಿಚಾರಪೂರ್ಣ ಜ್ಞಾನಾಭಿವೃದ್ಧಿಗಾಗಿ ಒಡಪುಗಳು ಮಕ್ಕಳಿಗೆ ನೆರವಾಗುತ್ತವೆ" ಎಂಬ ಮಾತು ಔಚಿತ್ಯಪೂರ್ಣವಾಗಿದೆ.

ಜಾನಪದದಲ್ಲಿ ಬಳಕೆಯಲ್ಲಿದ್ದ ಒಡಪುಗಳನ್ನು ಆರು ಹಂತವಾಗಿ ಪರಿಶೀಲಿಸಬಹುದು.

ಚುಟುಕು ಮಾತಿನ ಒಡಪುಗಳು :

ಉದಾ: (೧) ಹಸಿರು ಗಿಡದ ಮೇಲೆ ಮೊಸರು ಚೆಲ್ಲಿದೆ- (ಮಲ್ಲಿಗೆ).
(೨) ದುಡ್ಡು ಕೊಟ್ಟು ತರುವುದು, ಮುಂದಿಟ್ಟು ಅಳುವುದು- (ಈರುಳ್ಳಿ).

ಒಂದೇ ಸಾಲಿನ ಮಾತುಗಳಿಂದ ಎರಡಕ್ಕಿಂತ ಹೆಚ್ಚು ಅರ್ಥಬರುವ ಒಡಪುಗಳು :

ಉದಾ: (೩) ಕೋಣಿಗೆ ಕೊತ್ವಾಲ, ಓಣಿಗೆ ವಜೀರ-(ಬಡಿಗೆ, ನಾಯಿ).
(೪) ಅಂಕು ಡೊಂಕಾದ ಆಲದ ಮರ, ಅದರ ಮೇಲೆ ಕಂಚಿನ ಫಳ, ಅದರ ಮೇಲೆ ಮಲ್ಲಿಗೆ ರಾಶಿ. (ಅಡ್ಡಣಿಗೆ, ಕಂಚಿನ ಗಂಗಳು, ಅನ್ನ).

ಒಂದೇ ಉತ್ತರಕ್ಕಾಗಿ ಮೂರು–ನಾಲ್ಕು ತುಣುಕುಗಳ ಪ್ರಶ್ನಾವಳಿ ಇರುವಂತಹ ಒಡುಪುಗಳು :

ಉದಾ: (೫) ಅಂಗಡಿಯಲ್ಲಿಟ್ಟು ಮಾರೋದಲ್ಲ, ತಕ್ಕಡಿಯಲ್ಲಿಟ್ಟು ತೂಗೋದಲ್ಲ, ಅದು ಇರದಿದ್ದರೆ ನಡೆಯೋದಿಲ್ಲ–(ಬೆಂಕಿ).

(೬) ಕಾಲಿಲ್ಲ ಕೊಂಬುಂಟು, ಬಾಲದಾ ಪಕ್ಷಿಯದು. ಮೇಲೆ ಹಾರಿದರು ಗರುಡ ತಾನಲ್ಲ–(ಗಾಳಿಪಟ).

ಇಬ್ಬರ ಪ್ರತ್ಯೇಕ ಪ್ರಶ್ನೆಗಳಿಗೂ ಒಂದೇ ಉತ್ತರ ಬರುವಂತಹ ಒಡಪುಗಳು:

ಉದಾ: (೭) ನಿಮ್ಮ ಕುದುರೆ ಎಲ್ಲಿ ಹೋಯಿತು? ನಿಮ್ಮ ತಕ್ಕಡಿಗೆ ಏನಾಗಿದೆ?–(ದಂಡಿಗೆ ಹೋಗಿದೆ).

(೮) ಹಣ್ಣಿನ ಬೆಲೆ ಎಷ್ಟು? ಮಂಗಳೂರಿನ ದಾರಿ ಯಾವುದು?– (ನಾಕಾಣೆ).

ಉತ್ತರದ ಅಕ್ಕಪಕ್ಕಗಳನ್ನು ಹೇಳಿ ಪ್ರಶ್ನೆಮಾಡುವಂತಹ ಒಡಪುಗಳು :

ಉದಾ: (೯) ನಾನು ಮೂರಕ್ಕರುಗಳ ಸುವಾಸನೆಯ ಗಿಡ, ಮಧ್ಯದಕ್ಕರ ತೆಗೆದರೆ ಪಶುವಾದೆ, ಮೊದಲಕ್ಕರ ತೆಗೆದರೆ ತೋಟವಾದೆ ಏನದು?–(ದವನ).

ಜನಪದ ಧಾಟಿಯ ಹಾಡಿನ ರೂಪದ ಪ್ರಶ್ನೋತ್ತರಗಳ ಒಡಪುಗಳು:

ಉದಾ : ೧೦. **ಪ್ರಶ್ನೆ**	**ಉತ್ತರ**
ಮೂರು ಕಾಲಲಿ ನಿಲ್ಲೋದು	ಮೂರು ಕಾಲಲಿ ನಿಲ್ಲೋದು
ಒಣಮರ ಸುತ್ತೋದು	ಒಣಮರ ಸುತ್ತೋದು
ಬಾಯಾರಿದ್ದಾಂಗ ತಾ ನೀರ	ಬಾಯಾರಿದ್ದಾಂಗ ತಾ ನೀರ
ಕುಡಿಯೋದು.	ಕುಡಿಯೋದು.
ನಾರಿ ನೀ ಬಲ್ಲರೆ ಹೇಳ	ಈ ಬಕಪನ, ಸಾಣೆಯ ಕಲ್ಲಲ್ಲೇನ
ಮೊರಿ ನೀ ಬಲ್ಲರೆ ಹೇಳ.	ಜಾಣ ಸಾಣೆಯ ಕಲ್ಲಲ್ಲೇನು?

ಹೀಗೆ ಹಲವು ರೀತಿಯ ಒಡಪುಗಳಿಂದ ಮಕ್ಕಳ ಮನಸ್ಸನ್ನು ರಂಜಿಸುವುದರೊಂದಿಗೆ, ಅವರ ಜ್ಞಾನದ ಮಟ್ಟವನ್ನು ಅಭಿವೃದ್ಧಿಪಡಿಸುವಲ್ಲಿ 'ಶಂಬಾ' ಅವರ 'ಮಕ್ಕಳ ಒಡಪುಗಳು' ಸಾರ್ಥಕವಾಗಿವೆ. ಇಂಥ ಒಡಪುಗಳಿಗೆ ಜನಪದ ಸಾಹಿತ್ಯದಲ್ಲಿ ತನ್ನದೆ ಆದ ಸ್ಥಾನವಿದೆ. ಇವು ಮನರಂಜನೆಯನ್ನು ಒದಗಿಸುವ ಸಾಧನಗಳಲ್ಲಿ ಒಂದಾಗಿವೆ ಎಂದು ಹೇಳಿದರೆ ಅತಿಶಯೋಕ್ತಿ ಆಗಲಾರದು.

ವೈಚಾರಿಕ-ಸಾಮಾಜಿಕ ಚಿಂತನೆ ವಿಕಾಸ

ರೂಢಿ ಹಾಗೂ ಭಾವಿಕ ಕಲ್ಪನೆಗಳು (೧೯೪೦)

೧೯೪೦ ರಲ್ಲಿ ರಚನೆಯಾಗಿದೆ. ರೂಢಿ ಅಥವಾ ಸಂಪ್ರದಾಯಗಳ ಉಗಮದ ಬಗೆಗೆ ಪ್ರಸ್ತಾಪಿಸುವ ಶಂಬಾ ಅವರು ಅವು ಉಳಿದು ಬೆಳೆದು ಬಂದಿರುವುದನ್ನು ಗುರುತಿಸುವ ಪ್ರಯತ್ನ ಮಾಡಿದ್ದಾರೆ.

ಅನಾದಿ ಕಾಲದಿಂದ ಸಮಾಜದ ಜೊತೆಗೆ ಹುಟ್ಟಿ ಬೆಳೆದ ರೂಢಿಗಳು ಕಾಲಾನಂತರ ಕಾಲ್ಪನಿಕ ಭಾವನೆಗಳಾಗಿ ಇಂದಿಗೂ ಉಳಿದಿವೆ. ಉದಾಹರಣೆಗೆ : ವಿವಾಹದ ಸಂದರ್ಭದಲ್ಲಿ ಒಂದು ಸಮುದಾಯ ಬನ್ನಿ ಟೊಂಗೆಯನ್ನಿಟ್ಟರೆ, ಇನ್ನೊಂದು ಸಮುದಾಯ ಹಿಪ್ಪೆಯ ಟೊಂಗೆಯನ್ನು ಇಡಬಹುದು. ಇದು ಆಯಾ ಜನಸಮುದಾಯಗಳಲ್ಲಿ ಈಗಲೂ ಮುಂದುವರೆದಿವೆ. ಮದುವೆಯ ಮಾತುಕತೆಯ ನಡುವೆ ಒಂಟಿಸೀನು ಸೀತ ಮುಗ್ಧ ಮಗುವಿಗೆ ಮುದುಕಪ್ಪನ ಕಪಾಳ ಮೋಕ್ಷದ ಪ್ರಸಂಗ ನಮ್ಮಲ್ಲಿ ಇಂದಿಗೂ ಉಳಿದಿರುವ ಜ್ವಲಂತ ನಿದರ್ಶನಗಳಾಗಿವೆ.

ನಮ್ಮಲ್ಲಿ ಪರಂಪರಾಗತವಾಗಿ ಹರಿದುಬಂದಿರುವ ರೂಢಮೂಲ ಅನುಭವಗಳಾದ ಒಂಟಿಸೀನು, ಹಲ್ಲಿಶಕುನ, ಬೆಕ್ಕು ಅಡ್ಡಬರುವುದು ಇತ್ಯಾದಿ ಅಪನಂಬಿಕೆಗಳ ಹಿನ್ನೆಲೆಯಲ್ಲೂ ಅನೇಕ ಒಳಿತಾಗಿರುವುದು ಉಂಟು ಎಂದು 'ಶಂಬಾ' ಜ್ಞಾಪಿಸುತ್ತಾರೆ.

ಹಳೆಯ ಕಾಲದ ಸಂಪ್ರದಾಯಗಳ ಬಗೆಗೆ ಸೊಗಸಾಗಿ ವಿಡಂಬಿಸಿದ್ದಾರೆ: "ಹಿಂದಿನ ಕಾಲದ ಯಜ್ಞ ಕಾರ್ಯಗಳಲ್ಲಿ ಸೋಮರಸವನ್ನು ಸೋಸಲು ಉಣ್ಣೆಯ ಬಟ್ಟೆಯನ್ನು ಬಳಸುತ್ತಿದ್ದುದು ರೂಢಿ. ಕಾಲಾನಂತರ ಹತ್ತಿ ವಸ್ತ್ರಗಳ ಬಳಕೆಯು ಪ್ರಾರಂಭವಾಗಿ ಈ ಸೋಮರಸವನ್ನು ಸೋಸಲು ಹತ್ತಿಯ ವಸ್ತ್ರವೆ ಹೆಚ್ಚು ಸೂಕ್ತವಾಗಿ ಕಂಡಿತು. ಆಗ ಅಂದಿನ ಪ್ರಗತಿಪರ ಆಲೋಚನೆಯ ಯಜ್ಞಕರ್ತೃಗಳು ಒಂದು ಉಪಾಯವನ್ನು ಹುಡುಕಿದರು. ಆ ಪ್ರಕಾರ ಸೋಮರಸವನ್ನು ಉಣ್ಣೆ ಬಟ್ಟೆಗೆ ಬದಲು ಹತ್ತಿ ಬಟ್ಟೆಯಿಂದಲೇ ಸೋಸಬಹುದು. ಆದರೆ ಆ ಹತ್ತಿ ವಸ್ತ್ರದ ಕೊನೆಗಿಷ್ಟು ಉಣ್ಣೆಯ ಎಳೆಯನ್ನಾದರೂ ಸಿಕ್ಕಿಸಿರಬೇಕಾದ್ದು ಕಡ್ಡಾಯವಾಯಿತು. ಇಂತಹ ಉಲ್ಲೇಖಗಳು ಜಾನಪದದಲ್ಲಿದ್ದ ಬರಿಯ ಕಟ್ಟು ಕಥೆಗಳಲ್ಲ. ಅಂದಿನ ಕಾಲದ ಕಟುವಾಸ್ತವಗಳಾಗಿದ್ದವು ಎಂಬುದರ ಕಡೆಗೆ ಓದುಗರ ಕಣ್ತೆರೆಸುವ ಪ್ರಯತ್ನ 'ಶಂಬಾ' ಅವರದಾಗಿದೆ.

ಜನಪದರು ಸಂಪ್ರದಾಯ-ರೂಢಿಗಳಿಗೆ ದಾಸರಾಗಿ ಬಾಳಬಾರದು, ಸರಿಯಾದದ್ದನ್ನು ವಿವೇಕದಿಂದ ಆಚರಿಸುವ ಪರಂಪರೆ ನಮ್ಮದಾಗಬೇಕು, ಯಾವುದೆ ಒಂದು ನಾಡಿನ ಸಾಂಸ್ಕೃತಿಕ ಚರಿತ್ರೆ, ಅಲ್ಲಿನ ಜನತೆಯ ಆಚಾರ-ವಿಚಾರ ಹಾಗೂ ರೂಢಿ ಮತ್ತು ನಂಬಿಕೆಗಳು ಎಂಬುದನ್ನು ಮರೆಯಬಾರದು, ವೈಚಾರಿಕ ಶಿಷ್ಟ ಪರಂಪರೆ ನಮ್ಮದಾಗಲಿ ಎಂದು ಶಂಬಾ ಹಾರೈಸುತ್ತಾರೆ.

ದಾರಿಯ ಬುತ್ತಿ : 'ದಾರಿಯ ಬುತ್ತಿ' ಮೂವತ್ತು ಪುಟಗಳ ಸುಭಾಷಿತ ಸಂಗ್ರಹ. (ಚಿಂತನೆಗಳ ಸಂಕಲನ). ೧೯೭೨ ರಲ್ಲಿ ಸಮಾಜ ಪುಸ್ತಕಾಲಯದಿಂದ ಪ್ರಕಟಗೊಂಡಿದೆ. 'ಶಂಬಾ' ಅವರು ತಮ್ಮ ಮುನ್ನುಡಿಯಲ್ಲಿ 'The Art of worldy wisdom' ಎಂಬ ಸ್ಪೈನ್ ಪುಸ್ತಕದ ಆಧಾರದಿಂದ 'ದಾರಿಯ ಬುತ್ತಿ' ಎಂದು ನಮ್ಮ

ಭಾಷೆ, ನಮ್ಮ ಸಂಸ್ಕೃತಿಗೆ ಒಗ್ಗುವಂತೆ ಸಿದ್ಧವಾಗಿದೆ ಎಂದು ತಿಳಿಸಿದ್ದಾರೆ. ಆದ್ದರಿಂದ ಇದು ಅನುವಾದವೂ ಸ್ವತಂತ್ರ ಕೃತಿಯೂ ಆಗಿದೆ!

ಇಲ್ಲಿನ ಚಿಂತನೆಗಳ ಸ್ವರೂಪ, ವಿಧಾನ, ನಿರೂಪಣೆಗಳನ್ನು ನೋಡಬಹುದು :

"ಕೊಡುಗೆಯ ಬಗೆ; ತಿರುಗಿ ಬರಲಾರದಷ್ಟು ಎಂದೂ ಕೊಡಬೇಡ, ಏಕಂದರೆ ಮಿತಿಗಿಂತ ಹೆಚ್ಚು ಕೊಟ್ಟರೆ ಹದಗೆಡುವುದು. ತನ್ನಿಂದ ಇನ್ನು ತೀರಿಸುವುದು ಸಾಧ್ಯವಿಲ್ಲವೆಂದು ಕಂಡೊಡನೆ ಅವನು ಮೋರೆತಪ್ಪಿಸುವನು. ಹೆಚ್ಚು ಕೊಟ್ಟು ಒಬ್ಬರನ್ನು ಕಳಕೊಳ್ಳುವುದು ಯಾವ ಜಾಣ್ಮೆ? ಕೆಲವರಂತೂ ಆಜನ್ಮ ಸಾಲಿಗರೆನಿಸಿಕೊಂಬುದನ್ನು ತಪ್ಪಿಸಿಕೊಳ್ಳಲು ಹಗೆಗಳಾಗಿ ಪರಿಣಮಿಸುವರು. ಹೊಳೆ ದಾಟಿದ ಮೇಲೆ ಅಂಬಿಗನ ಅವಶ್ಯಕತೆ ಉಳಿಯುವುದಿಲ್ಲ. ಒಬ್ಬರಿಗೆ ಹೊರಲಾರದ ಉಪಕಾರ ಮಾಡಿ ಅವರಿಗೆ ಯಾವಾಗಲೂ ತಮ್ಮೆದುರು ತಲೆತಗ್ಗಿಸಿಕೊಂಡಿರುವ ಪ್ರಸಂಗವನ್ನೇಕೆ ತರಬೇಕು? ನೀಡುವ ನೆರವು ಕೊಡ-ಕೊಂಬುವವರಿಬ್ಬರಿಗೂ ತೊಂದರೆಯಾಗುವಂತಹುದು ಆಗದಿದ್ದರೆ ಅದರಲ್ಲಿ ಇಬ್ಬರಿಗೂ ಹಿತ; ಆನಂದ".

ಎಡೆಗಳು ಹೇಳಿದ ಕಂನಾಡ ಕಥೆ (೧೯೪೭) : ಕನ್ನಡ ಸ್ಥಳನಾಮಗಳ ಅಧ್ಯಯನ ಕ್ಷೇತ್ರಕ್ಕೆ ಅಸ್ತವಾರ ಹಾಕಿದ ವಿದ್ವಾಂಸರಲ್ಲಿ 'ಶಂಬಾ' ಜೋಶಿ ಅವರು ಒಬ್ಬರು. ಈ ದಿಸೆಯಲ್ಲಿ 'ಎಡೆಗಳು ಹೇಳಿದ ಕಂನಾಡ ಕಥೆ' ಪ್ರಾಮುಖ್ಯತೆ ಪಡೆದುಕೋಳ್ಳುತ್ತದೆ. ಒಂದು ನಾಡಿನ ಸಾಂಸ್ಕೃತಿಕ ಚರಿತ್ರೆಯನ್ನು ರೂಪಿಸುವಲ್ಲಿ ಸ್ಥಳನಾಮಗಳು ಹೇಗೆ ಆಧಾರವಾಗುತ್ತವೆ ಎಂಬುದನ್ನು ಶಂಬಾ ಅವರು ತಮ್ಮ ಸಂಸ್ಕೃತಿ ಸಂಶೋಧನೆಯಲ್ಲಿ ತೋರಿಸಿಕೊಟ್ಟಿದ್ದಾರೆ. ಕನ್ನಡ ಸಂಸ್ಕೃತಿ, ಮರಾಠಿ ಸಂಸ್ಕೃತಿಯ ಅನ್ವೇಷಣೆಯಲ್ಲೂ ಶಂಬಾ ಅವರು ಸ್ಥಳನಾಗಳ ಪ್ರಮಾಣವನ್ನು ಒದಗಿಸಿರುವುದನ್ನು ನಾವು ಕಾಣುತ್ತೇವೆ.

ಹೀಗೆ ಶಂಬಾ ಅವರು ಕೆಲವು ಕೃತಿಗಳಲ್ಲಿ ಬಳಸಿರುವ ಜಾನಪದ ಕ್ಷೇತ್ರಕ್ಕೆ ಸಂಬಂಧಿಸಿದ ಒಡಪುಗಳು, ರೂಢಿ ಸಂಪ್ರದಾಯಗಳು ಬದುಕಿಗೆ ದಾರಿದೀಪವಾಗಲಿರುವ ಸುಭಾಷಿತಗಳು ಮತ್ತು ಕನ್ನಡ ಸ್ಥಳನಾಮಗಳ ವಿಶ್ಲೇಷಣೆಯನ್ನು ಜಾನಪದ ಕ್ಷೇತ್ರಕ್ಕೆ ಸೇರಿಸಬಹುದು.

ವೈಶಿಷ್ಟ್ಯಗಳು : 'ಶಂಬಾ' ಅವರು ಮೂಲತಃ ವಿಚಾರವಾದಿಗಳು, ಸಂಶೋಧಕರು. ಮೂಲತಃ ಸಾಂಸ್ಕೃತಿಕ ವ್ಯಾಸಂಗ, 'ವಿಚಾರವೇ ಜೀವನದ ಬೆಳಕು'. ಎಂದು ಮುನ್ನಡೆದವರು. ಅದನ್ನು ತಮ್ಮ ಬದುಕಿನಲ್ಲಿ ಸಾರ್ಥಕಗಳಿಸಿಕೊಂಡವರು. ತಾವು ಕೈಕೊಂಡ ಪ್ರತಿಯೊಂದರಲ್ಲೂ ತಮ್ಮ ಸ್ವಂತಿಕೆಯನ್ನು ಉಳಿಸಿಕೊಂಡವರು. ಲಿಖಿತ ಶಾಸನ, ಕಾವ್ಯಗಳಿಂದ, ಸಂಸ್ಕೃತಿ ಅಧ್ಯಯನ ನಡೆಯುತ್ತಿದ್ದ ಕಾಲದಲ್ಲಿ, ಆಚಾರ, ಸಂಪ್ರದಾಯ, ಜನಪದ ನಂಬಿಕೆಗಳನ್ನು ಗಮನಿಸದೆ, ಸಂಸ್ಕೃತಿ ಅಧ್ಯಯನ ಮಾಡಿದರೆ ಅದರಲ್ಲಿ ಅರ್ಥವಿಲ್ಲವೆಂದು ಹೇಳಿದವರು. ಅದನ್ನು ಒಂದು ಮಾರ್ಗ ಪದ್ಧತಿಯನ್ನಾಗಿ ರೂಪಿಸಿದವರು. ಸಂಸ್ಕೃತಿ ಅಧ್ಯಯನವನ್ನು ಭಾಷಾಶಾಸ್ತ್ರ, ಮನಃಶಾಸ್ತ್ರ, ಜೀವಶಾಸ್ತ್ರ, ಪುರಾತನಶಾಸ್ತ್ರ, ಇತಿಹಾಸಶಾಸ್ತ್ರ, ದೈವತಶಾಸ್ತ್ರ ಹೀಗೆ ನಾನಾ ಶಾಸ್ತ್ರಗಳ ಸಹಾಯದಿಂದ ಅಭ್ಯಾಸ ಮಾಡಿದವರು. 'ಶಂಬಾ' ಅವರಲ್ಲಿ ಇತಿಹಾಸ ಸಂಶೋಧನೆಗಳಲ್ಲಿ ಇರಬೇಕಾದ ವಿದ್ವತ್ತು, ಶೀಘ್ರ ಗ್ರಹಣಶಕ್ತಿ, ವಿವೇಚನಾಸಾಮರ್ಥ್ಯ, ಹರಿತವಾದ ತರ್ಕಸರಣಿ ಮತ್ತು ಸ್ಮರಣಶಕ್ತಿ ಇವೆಲ್ಲವೂ ಹರಳುಗಟ್ಟಿರುವುದರಿಂದ ನಾಡಿನ ಗಣ್ಯ ವಿದ್ವಾಂಸರಾಗಲು ಕಾರಣವಾಯಿತು.

ಹಿರಿಯ ಸಾಧನೆಗೆ ಮೆಚ್ಚಿಕೆ : 'ಶಂಬಾ' ಜೋಶಿ ಅವರು ತಮ್ಮ ಬದುಕಿನ ಕಾಲಾವಧಿಯಲ್ಲಿ ಗೈದ ಹಿರಿಯ ಸಾಧನೆಯನ್ನು ಮೆಚ್ಚಿ ನಾಡಿನ ಅನೇಕ ವಿದ್ವಾಂಸರು ಪ್ರಶಂಸಿಸಿದ್ದಾರೆ. ವಿ. ಸೀ. ಅವರು ಒಂದೆಡೆ "ಅಪಾರವಾದ ಬುದ್ಧಿಮತ್ತೆಯಿಂದ ತಮ್ಮ ಅಧ್ಯಯನವನ್ನು

ಸ್ಪಷ್ಟವಾಗಿಸಿಕೊಂಡ ಧೀಮಂತ ಸಂಶೋಧಕ ಎಂದು ಕರೆದರೆ, ಶಿವರಾಮ ಕಾರಂತರು "ನಾಡು ನುಡಿಗಳ ಬಗೆಗೆ ಪ್ರಾಂಜಲ ಮನಸ್ಸಿನಿಂದ ಜನಹಿತಕ್ಕಾಗಿ, ವಿವಸ್ವನ್ ಮನು ಮಾನವ ಧರ್ಮದ ಬಾಳಿಗಾಗಿ ತಮ್ಮ ಜೀವನವನ್ನೇ ಮುಡುಪಿಟ್ಟ ಸತ್ಯಾನ್ವೇಷಕ" ಎಂದು ಕರೆದಿದ್ದಾರೆ. ಹೀಗೆ ಶಂಬಾ ಅವರಲ್ಲಿ ವಿಶಿಷ್ಟತೆಯನ್ನು ಕಾಣಬಹುದು. ವೈಚಾರಿಕ ನೋಟವೇ ಇಲ್ಲದ ಕಾಲದಲ್ಲಿ ಜನಕ್ಕೆ ವೈಚಾರಿಕ ನೋಟವನ್ನು ನೀಡಿದವರು 'ಶಂಬಾ' ಅವರು. ಕಂನಾಡ ಅಧ್ಯಯನಕ್ಕಾಗಿ ವೇದೋಪನಿಷತ್ತುಗಳವರೆಗೂ ಅಧ್ಯಯನ ಮಾಡಿದವರು; ಪ್ರಾಚೀನ ಶಾಸ್ತ್ರಗಳ ವ್ಯಾಸಂಗ ಮಾಡಿದವರು. ಸತ್ಯದ ಸ್ವರೂಪ ಏನು? ಎಂಬುದನ್ನು ಆಳವಾಗಿ ಚರ್ಚಿಸಿದವರು. ಎರಡಿಲ್ಲದ ಬಾಳುವೆಯೇ ಪೂರ್ಣಕೃತಿ. ಆಚಾರ-ವಿಚಾರಗಳಲ್ಲಿ ಅಂತರ ಶಕ್ಯವಿದ್ದಷ್ಟು ಕಡಿಮೆ ಇರಬೇಕೆಂದು ಸಾರಿ ಹೇಳಿದವರು. ತಾನು ಸಮಾಜ ಸೃಷ್ಟಿಯ ಒಂದು ಅಂಶವೆಂದು ತಿಳಿದುಕೊಂಡರು. ಜಾತಿ, ಧರ್ಮ, ವರ್ಗ, ವರ್ಣ, ಪಂಥಾಭಿಮಾನಿಗಳು, ಬೆಳೆಯುವುದಕ್ಕೆ ಅವಕಾಶ ಇರಬಾರದು ಎಂಬ ಸಾರ್ವಕಾಲಿಕ ಸತ್ಯವನ್ನು ತಮ್ಮ ಕೃತಿಗಳಲ್ಲಿ ಸಾರಿದವರು.

'ಶಂಬಾ' ಅವರು ತಮ್ಮ ಜೀವನದ ಕೊನೆಯವರೆಗೂ 'ಕನ್ನಡ ನಾಡು-ನುಡಿ' ಚಿಂತನೆಯಲ್ಲಿ ಮುಳಿಗಿದವರು. ತಮ್ಮ ವೈಯಕ್ತಿಕ ನೆಲೆ-ಬೆಲೆಗೆ ಪ್ರಾಧಾನ್ಯಕೊಡದೆ, ಸಮಷ್ಟಿಜೀವನದ ನೆಲೆ-ಬೆಲೆಯನ್ನು ಕಂಡುಕೊಳ್ಳಲು ಹೊರಟರು. ಆಚಾರ-ವಿಚಾರ ಎರಡರಲ್ಲೂ ಅಂತರವಿರದೆ ಬಾಳಿದವರು. 'ಶಂಬಾ' ಅವರು ದಿನಾಂಕ ೮-೯-೧೯೯೧ ರಂದು ವೈವಸ್ವತಮನು ಮಾನವನಲ್ಲಿ ಸೇರಿಕೊಂಡರು.

ಪ್ರಶಸ್ತಿ-ಪುರಸ್ಕಾರ : 'ಶಂಬಾ' ಅವರ ವಿದ್ವತ್ತನ್ನುಕಂಡು, ಮೈಸೂರು ವಿಶ್ವವಿದ್ಯಾಲಯವು ಅವರಿಗೆ ಗೌರವ ಡಾಕ್ಟರೇಟ್ ನೀಡಿದೆ (೧೯೭೧).

'ಶಂಬಾ' ಅವರ 'ಕರ್ನಾಟಕ ಸಂಸ್ಕೃತಿಯ ಪೂರ್ವ ಪೀಠಿಕೆ'ಗೆ "ಕೇಂದ್ರ ಸಾಹಿತ್ಯ ಅಕಾಡೆಮಿ ಬಹುಮಾನ ಬಂದಿದೆ." 'ಶಂಬಾ' ಅವರು ಮಡಿಕೇರಿಯಲ್ಲಿ ಜರುಗಿದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು (೧೯೮೧). 'ಶಂಬಾ' ಅವರಿಗೆ 'ಅಧ್ಯಯನ' ಎಂಬ ಅಭಿನಂದನ ಗ್ರಂಥ (೧೯೮೦) ಅರ್ಪಿಸಲಾಯಿತು. 'ಶಂಬಾ' ಅವರ ಸ್ಮರಣೆಗಾಗಿ ಬೆಂಗಳೂರಿನಲ್ಲಿ 'ಶಂಬಾ ವಿಚಾರ ವೇದಿಕೆ' (೧೯೯೧) ಅಸ್ತಿತ್ವಕ್ಕೆ ಬಂದಿದೆ. 'ಶಂಬಾ' ಅವರ ವಿಚಾರ ಹರಡುವಲ್ಲಿ ಅದು ನಿರತವಾಗಿದೆ.

ಆಕರ ಗ್ರಂಥಗಳು :

೧. ಶಂ. ಬಾ. ಕೃತಿ ಸಮೀಕ್ಷೆ

ಸಂ. : ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್

ಪ್ರ. : ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು, ೧೯೯೨.

೨. ಶಂಬಾ ಸಂಸ್ಕೃತಿ ಚಿಂತನೆ

ಸಂ. : ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್

ಪ್ರ. : ಶ್ರೀಮತಿ ಭಾನುಮತಿ ಎಸ್. ಶಹಾ, ಸಪ್ನ ಬುಕ್ ಹೌಸ್, ತುಂಗಾ ಕಾಂಪ್ಲೆಕ್ಸ್, ಗಾಂಧಿನಗರ, ಬೆಂಗಳೂರು-೯, ೧೯೯೮.

೩. ಸಾಹಿತ್ಯ ಮತ್ತು ಸಂಸ್ಕೃತಿ ಸ್ಪಂದನ

ಸಂ. : ಡಾ. ಜಿ. ಎಂ. ಹೆಗಡೆ

ಪ್ರ. : ರಂಜನಾ ಪ್ರಕಾಶನ, ಕಲ್ಯಾಣನಗರ, ಧಾರವಾಡ, ೧೯೯೭.

೪. 'ಶಂಬಾ ಜೋಶಿ'

ಸಂ. : ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್

ಪ್ರ. : ಸಾಹಿತ್ಯ ಅಕಾಡೆಮಿ, ೨೦೦೧.

ಎರಡು ಮಾತು

ಡಾ. ಶಂ. ಬಾ. ಜೋಶಿಯವರು ಸಂಕೀರ್ಣ ಶೈಲಿಯ ಸಂಶೋಧಕರೆಂದೇ ಪ್ರಸಿದ್ಧಿ. ಡಿ.ವಿ.ಜಿ.ಯವರು ಜೋಶಿಯವರ ಬರವಣಿಗೆಯ ರೀತಿಗೆ ಬೆಚ್ಚುತ್ತಿದ್ದರು. ಸುಲಭವಾಗಿ ಅರ್ಥವಾಗುವುದಿಲ್ಲ ಎಂಬುದು ಅದಕ್ಕೆ ಕಾರಣ. ಇತರ ಸಶೋಧಕರಿಗಿಂತ ಭಿನ್ನವಾಗಿರಬೇಕೆಂದು ಹಾಗೆ ಬರೆದರೋ ಅಥವಾ ಅವರ ವಿಚಾರಧಾರೆಯೇ ಹಾಗೆಯೋ ಹೇಳುವುದು ಕಷ್ಟ. ಹಿರಿಯ ತಲೆಮಾರಿನ ಸಂಶೋಧಕರಲ್ಲಿ ಕಾಣದ ಕ್ಲಿಷ್ಟತೆ ಜೋಶಿಯವರಲ್ಲಿರುವುದಂತೂ ನಿಜ.

ದೇವುಡು ನರಸಿಂಹ ಶಾಸ್ತ್ರಿಗಳಂತೆ ಶಂ. ಬಾ. ಜೋಶಿಯವರು ಸಂಸ್ಕೃತಿ ಚಿಂತನೆಗೆ ಜಾನಪದವನ್ನು ದುಡಿಸಿಕೊಂಡಿದ್ದು ವಿಶೇಷ. ಪ್ರಧಾನ ಸಂಸ್ಕೃತಿ ಮತ್ತು ಉಪಸಂಸ್ಕೃತಿ, ಶಿಷ್ಟಪದ ಮತ್ತು ಜಾನಪದ ಒಂದೇ ರೀತಿಯಲ್ಲಿ ಮಿಳಿತವಾದರೆ ಮಾತ್ರ ಸಂಸ್ಕೃತಿ ಮೀಮಾಂಸೆ ಮೌಲಿಕವಾಗುವುದೆಂಬುದು ಅವರ ನಿಲವು. ಅಂದಿನ ಅವರ ಸಹಜ ಅಧ್ಯಯನದ ವಿಚಾರಗಳು ಇಂದಿನ ಜಾನಪದ ಹಿನ್ನೆಲೆಯ ಗ್ರಹಿಕೆಗೂ ಪಕ್ಕಾಗುವುದು ಗಮನಾರ್ಹ.

ಗೊತ್ತಿದ್ದೋ ಗೊತ್ತಿಲ್ಲದೆಯೋ ಶಂ. ಬಾ. ಜೋಶಿಯವರ ಸಂಸ್ಕೃತಿ ಮಂಥನದಲ್ಲಿ ಜಾನಪದ ಚಿಂತನೆಗಳು ಸೇರಿಕೊಂಡಿವೆ. ಅವರು ಸ್ಥಳನಾಮ ಅಧ್ಯಯನಕ್ಕೆ ನಾಂದಿ ಹಾಡಿದರು. ಮಕ್ಕಳ ಒಡಪುಗಳಲ್ಲಿ ಹಿರಿಯ ತತ್ವಗಳನ್ನು ಹೆಕ್ಕಿದರು. ಜನಾಂಗೀಯ ಪೃಥಕ್ಕರಣದಲ್ಲಿ ಮಣ್ಣಿನ ನೆಲೆಯನ್ನು ಗುರುತಿಸಿದರು. ಭಾಷಿಕ ಇತಿಮಿತಿಯನ್ನು ಚರ್ಚಿಸಿದರು. ಸಂಸ್ಕೃತಿಯ ಎಲ್ಲಾ ಮಗ್ಗುಲಲ್ಲೂ ಸತ್ಯದ ಹುಡುಕಾಟ ನಡೆಸಿದರು. ಅವರ ಸಂಶೋಧನೆ ನಾರಿಕೇಳ ಪಾಕ. ಕಷ್ಟಪಟ್ಟರೆ ಕೊಬ್ಬರಿ ಗಿಟಕು; ಇಲ್ಲದಿದ್ದರೆ ಇಲ್ಲ.

ಗಂಭೀರ ಸ್ವಭಾವದ ಶಂ. ಬಾ. ಜೋಶಿಯವರು ಮಡಿಕೇರಿ ಸಾಹಿತ್ಯ

ಸಮ್ಮೇಳನದಲ್ಲಿ (೧೯೮೨) ಮುಗ್ಧ ಮಗುವಿನಂತೆ ವರ್ತಿಸಿ ಆಶ್ಚರ್ಯ ಹುಟ್ಟಿಸಿದರು. ಅವರು ನೋಡುವುದಕ್ಕೆ ಮುಳ್ಳು ಮಿಶ್ರಿತ ಒರಟಾದ ಹಲಸಿನ ಹಣ್ಣು; ಮನಸ್ಸು ಹಲಸಿನ ತೊಳೆ. ತಾಳ್ಮೆಯಿಂದ ಬಿಡಿಸಿದರೆ ಸಿಹಿಯಾದ ತೊಳೆ, ಇಲ್ಲದಿದ್ದರೆ ಅಂಟು, ಕೆಸರು. ಡಾ. ಜೋಶಿಯವರ ವ್ಯಕ್ತಿತ್ವಕ್ಕೂ ಅವರ ಸಾಹಿತ್ಯಕ್ಕೂ ವ್ಯತ್ಯಾಸವಿಲ್ಲ.

ಡಾ. ಶಂ. ಬಾ. ಜೋಶಿಯವರ ಬರವಣಿಗೆಯ ಕ್ಲಿಷ್ಟ ವಿಚಾರಗಳನ್ನು ಡಾ. ರಾಜಶೇಖರ ಇಚ್ಚಂಗಿಯವರು ಸರಳವಾಗಿ ನಿರೂಪಿಸಲು ಪ್ರಯತ್ನಿಸಿರುವುದನ್ನು ಪ್ರಸ್ತುತ ಗ್ರಂಥದಲ್ಲಿ ಕಾಣಬಹುದು. ಶ್ರೀಯುತರು ಪ್ರಾಧ್ಯಾಪಕರು, ಅಧ್ಯಯನ ಶೀಲರು, ಕೃತಿ ಕೃತಿಕಾರರ ಅಂತರಂಗವನ್ನು ಗ್ರಹಿಸಬಲ್ಲಂಥವರು, ಸಾಹಿತ್ಯ ರಚನೆಯಲ್ಲಿ ಗಂಭೀರವಾಗಿ ತೊಡಗಿಸಿಕೊಂಡಿರುವಂಥವರು. ಈ ಕಿರುಗ್ರಂಥ ಶಂ. ಬಾ. ಜೋಶಿಯವರ ಮೂಲ ಗ್ರಂಥಗಳತ್ತ ಗಮನ ಸೆಳೆಯುವುದೆಂದು ಭಾವಿಸುತ್ತೇನೆ.

–ಪ್ರೊ. ಡಿ. ಲಿಂಗಯ್ಯ

ಜನಪ್ರಿಯ ಜಾನಪದ ಪುಸ್ತಕಗಳು

ಪ್ರತಿ ಪುಸ್ತಕದ ಬೆಲೆ ರೂ. 10–00

1.	ಡಾ. ಸಿಂಪಿ ಲಿಂಗಣ್ಣ	ಡಾ. ಮ. ಗು. ಬಿರಾದಾರ
2.	ಮತಿಘಟ್ಟ ಕೃಷ್ಣಮೂರ್ತಿ	ಡಾ. ಹಂಪನಹಳ್ಳಿ ತಿಮ್ಮೇಗೌಡ
3.	ಗೊರೂರು ರಾಮಸ್ವಾಮಿ ಅಯ್ಯಂಗಾರ್	ಡಾ. ಸಿ. ಜಿ. ವೆಂಕಟಯ್ಯ
4.	ಬಾಳುವೆ ಮಾಡಿದರೆ ಬಾ ತಂಗಿ ಅಂದಾರು	ಪ್ರೊ. ಡಿ. ಲಿಂಗಯ್ಯ
5.	ಜ್ಯೋತಿಯೇ ಆಗು ಜಗಕೆಲ್ಲ	ಪ್ರೊ. ಡಿ. ಲಿಂಗಯ್ಯ
6.	ದಕ್ಷಿಣ ಕರ್ನಾಟಕದ ಜನಪದ ಕಲೆಗಳು	ಡಾ. ಚಕ್ಕೆರೆ ಶಿವಶಂಕರ್
7.	ಉತ್ತರ ಕರ್ನಾಟಕದ ಜನಪದ ಕಲೆಗಳು	ಡಾ. ಚಕ್ಕೆರೆ ಶಿವಶಂಕರ್
8.	ಕರಾವಳಿ ಕರ್ನಾಟಕ ಜನಪದ ಕಲೆಗಳು	ಡಾ. ಚಕ್ಕೆರೆ ಶಿವಶಂಕರ್
9.	ಕೊಡಗು ಜನಪದ ಕಲೆಗಳು	ಡಾ. ಚಕ್ಕೆರೆ ಶಿವಶಂಕರ್
10.	ಡಾ. ಬಿ. ಎಸ್. ಗದ್ದಗಿಮಠ	ಡಾ. ಸಿ. ಕೆ. ನಾವಲಗಿ
11.	ಗಾದೆ ಪಂ. ಹು. ಮ. ರಾಮಾರಾಧ್ಯ	ಪ್ರೊ. ಜಿ. ಅಶ್ವತ್ಥನಾರಾಯಣ
12.	ಪಿ. ಧೂಲಾ ಸಾಹೇಬ	ಶ್ರೀ ಕಾ. ಹು. ಬಿಜಾಪುರ
13.	ನಾಡೋಜ ಎಚ್. ಎಲ್. ನಾಗೇಗೌಡ	ಡಾ. ಚಕ್ಕೆರೆ ಶಿವಶಂಕರ್
14.	ಜನಪದ ವೃತ್ತಿಗಾಯಕರು	ಡಾ. ಚಕ್ಕೆರೆ ಶಿವಶಂಕರ್
15.	ವಿಜಾಪುರ ಜಿಲ್ಲೆಯ ಜನಪದ ಕಲೆ–ಕಲಾವಿದರು (ರೂ. 15)	ಡಾ. ಎಂ. ಎನ್. ವಾಲಿ
16.	ಜನಪದ ಜಾಣ ಗಣಿತ	ಜೀನಹಳ್ಳಿ ಸಿದ್ಧಲಿಂಗಪ್ಪ
17.	ಡಾ. ಎಂ. ಎಸ್. ಲಠ್ಠೆ	ಡಾ. ವೀರಣ್ಣದಂಡೆ
18	ಜನಪದ ರಂಗಭೂಮಿ	ಡಾ. ಚಕ್ಕೆರೆ ಶಿವಶಂಕರ್
19.	ಡಾ. ಜೀ.ಶಂ. ಪರಮಶಿವಯ್ಯ (ರೂ.15)	ಡಾ. ಡಿ. ಕೆ. ರಾಜೇಂದ್ರ
20.	ಜೀವ ಉಳಿಸುವ ಕಳೆಗಳು (ರೂ. 15)	ಶಾಂತಿ ನಾಯಕ
21.	ಆಣೆ ಪ್ರಮಾಣಗಳು (ರೂ. 15)	ಡಾ. ಸಿ. ಪಿ. ನಾಗರಾಜ

22.	ಜಾನಪದ ಜಂಗಮ ಎಸ್.ಕೆ. ಕರೀಂಖಾನ್	ಪ್ರೊ. ಡಿ. ಲಿಂಗಯ್ಯ
23.	ಜನಪದ ಭಾಷಾ ಚಮತ್ಕಾರ (ರೂ. 15)	ಶ್ರೀ ಜೀನಹಳ್ಳಿ ಸಿದ್ಧಲಿಂಗಪ್ಪ
24.	ಡಾ. ಆರ್. ಸಿ. ಹಿರೇಮಠ	ಡಾ. ಸಿ. ಕೆ. ನಾವಲಗಿ
25.	ಡಾ. ಎಂ. ಎಸ್. ಸುಂಕಾಪುರ (ರೂ. 15)	ಡಾ. ಸಿ. ಕೆ. ನಾವಲಗಿ
26.	ಸ್ವಾತಂತ್ರ್ಯ ಸಂಗ್ರಾಮದ ಲಾವಣಿಗಳು	ಬಿ. ನೀಲಕಂಠಯ್ಯ
27.	ಸ್ವಾತಂತ್ರ್ಯ ಸಮರದ ಲಾವಣಿಗಳು	ಎಸ್. ವಿಷಕಂಠರಾವ್
28.	ಡಾ. ಬೆಟಗೇರಿ ಕೃಷ್ಣಶರ್ಮ	ಡಾ. ರಾಜಶೇಖರ ಇಚ್ಚಂಗಿ
29.	ಅಬೆ ದುಬೊಅ	ಡಾ. ಬಿ. ಎಸ್. ತಲ್ವಾಡಿ
30.	ಬಿ. ಎಲ್. ರೈಸ್	ಡಾ. ಬಿ. ಎಸ್. ತಲ್ವಾಡಿ
31.	ಶಂ. ಬಾ. ಜೋಶಿ	ಡಾ. ರಾಜಶೇಖರ ಇಚ್ಚಂಗಿ
32.	ಡಾ. ದೇವೇಂದ್ರಕುಮಾರ ಹಕಾರಿ	ಡಾ. ಹರಿಲಾಲ ಪವಾರ್
33.	ಅರ್ಚಕ ಬಿ. ರಂಗಸ್ವಾಮಿ	ಕ್ಯಾತನಹಳ್ಳಿ ರಾಮಣ್ಣ

ಡಾ. ಶಂ. ಬಾ. ಜೋಶಿ

ಶಂಕರರಾವ್ ಬಾಳದೀಕ್ಷಿತ ಜೋಶಿಯವರು ಕ್ಲಿಷ್ಟ ಶೈಲಿಯ ಸಂಶೋಧಕರು. ಅವರ ಆಲೋಚನಾ ವಿಧಾನ, ವೈಚಾರಿಕ ನಿಲವು ಸಂಕೀರ್ಣ ಸ್ವರೂಪದ್ದು. ನಮ್ಮ ಪ್ರಾಚೀನ ಪರಂಪರೆಯ ಹುಡುಕಾಟ ಅವರ ಬರವಣಿಗೆಯ ಪ್ರಧಾನ ಹೂರಣ. ಸನಾತನ ಸಾಂಸ್ಕೃತಿಕ ಅಂಶಗಳನ್ನು ದೇಶೀ ನೆಲೆಯಲ್ಲಿ ಅಭಿವ್ಯಕ್ತಿಸಲು ಪ್ರಯತ್ನಿಸುವುದು ಅವರ ರೀತಿ. ಶಂ. ಬಾ. ಜೋಶಿಯವರು ತಮ್ಮ ಸಂಶೋಧನಾ ವಲಯಕ್ಕೆ ಜನಪದ ಸಂಸ್ಕೃತಿಯ ವಿದ್ಯಮಾನಗಳನ್ನು ದುಡಿಸಿಕೊಂಡಿರುವುದು ವಿಶೇಷ. ಸಂಸ್ಕೃತಿ ಮೀಮಾಂಸೆಯಲ್ಲಿ ಶಿಷ್ಟ ಪದದಂತೆ ಜನಪದವನ್ನೂ ಏಕಪ್ರಕಾರವಾಗಿ ಬಳಸಿಕೊಳ್ಳುವುದು ಅವರ ಜಾಯಮಾನ. ಭಾಷಿಕ ಜಾನಪದ, ಸಂಸ್ಕೃತಿ ಜಾನಪದ, ಜನಾಂಗೀಯ ಜಾನಪದಕ್ಕೆ ಸಂಬಂಧಿಸಿದ ಅವರ ಕೆಲವು ಗ್ರಂಥಗಳು ಅಧ್ಯಯನಕಾರರಿಗೆ ಅಕ್ಷಯನಿಧಿಯಾಗಿವೆ.

ಡಾ. ಶಂ. ಬಾ. ಜೋಶಿಯವರ ವ್ಯಾಪಕ ಸಂಶೋಧನಾ ವಸ್ತು ವಿಷಯಗಳನ್ನು ಪ್ರಸಿದ್ಧ ವಿದ್ವಾಂಸರಾದ ಡಾ. ರಾಜಶೇಖರ ಇಚ್ಚಂಗಿಯವರು ಸಮರ್ಥವಾಗಿ ಪರಿಚಯಿಸಿದ್ದಾರೆ.

ಪ್ರೊ ಡಿ. ಲಿಂಗಯ್ಯ

ಕರ್ನಾಟಕ ಜಾನಪದ ಪರಿಷತ್ತು
ನಂ. 1, ಜಲದರ್ಶಿನಿ ಬಡಾವಣೆ
ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,
ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು-560 054
janapadaparishath@hotmail.com